// THE MYSORE LEGISLATIVE ASSEMBLY DEBATES.

OFFICIAL REPORT OF THE FIRST SESSION OF THE SECOND LEGISLATIVE ASSEMBLY.

VOL. VII. No. 1.

# THE MYSORE LEGISLATIVE ASSEMBLY.

FIRST DAY.

*Wednesday, 18th June 1952.*

The Legislative Assembly met in the Assembly Hall, Old Public Offices, Bangalore, at Eleven of the Clock on Wednesday the 18th June 1952.

Mr. SPEAKER (Sri V. Venkatappa) in the Chair.

Mr. SPEAKER.—I have great pleasure in welcoming the new Members to the Assembly.

The Secretary will now read the two Notifications relating to the appointment of the Temporary Speaker and the person before whom the Oath should be taken.

## Appointment of Temporary Speaker.

THE SECRETARY.—

" Notification No. L. D. 293—L.A. 14-52-3, dated Bangalore, 14th May 1952, from the Legal Remembrancer and Secretary to Government Law Department.

"In exercise of the powers conferred by clause (1) of Article 180 of the Constitution of India, I, Jaya Chamaraja Wadiyar, Maharaja of Mysore, do hereby appoint Sri V. Venkatappa, Member, Legislative Assembly, to perform the duties of the Office of the Speaker of the Mysore Legislative Assembly till a Speaker is duly elected by the said Assembly."

## Appointment of the Temporary Speaker as the person before whom Members may take Oath.

Notification No. L. D. 454—L.A. 27-52-2, dated Bangalore, 13th June 1952. From the Legal Remembrancer and Secretary to Government, Law Department.

ORDER.

" I, Jaya Chamaraja Wadiyar, Rajpramukh of Mysore, do hereby appoint Sri V. Venkatappa, Temporary Speaker of the Mysore Legislative Assembly, as the person before whom the members of the said Assembly may make and subscribe the oath or affirmation in accordance with the provisions of Article 188 of the Constitution."

---

## Members Sworn.

Mr. SPEAKER.—The Members have now to take the Oath. In accordance with the previous practice, I propose to adopt the following procedure.

MR. (SPEAKER.)

The Ministers will first take the Oath; then the ex-Ministers. The other Members will take the Oath in the alphabetical order of their names. The Secretary will call out the names of the Members in the order I have indicated. I request that the Member whose name is called by the Secretary will please come to the Secretary's table, take the Oath, sign the Oath form or Affirmation and the Register of Members and then return to his seat.

(ಈ ಕೆಳಗೆ ಕಂಡ ಸದಸ್ಯರು ಪ್ರಮಾಣವಚನ ಸ್ವೀಕಾರ ಮಾಡಿದರು):—

ಶ್ರೀಗಳಾದ.—

1 ಕೆ. ಹನುಮಂತಯ್ಯನವರು (ರಾಮನಗರಂ)
2 ಟಿ. ಸಿದ್ಧಲಿಂಗಯ್ಯನವರು (ದೊಡ್ಡಬಳ್ಳಾಪುರ)
3 ಎ. ಜಿ. ರಾಮಚಂದ್ರರಾಯರು (ಹೊಳೇನರಸೀಪುರ)
4 ಟಿ. ಚನ್ನಯ್ಯನವರು (ಮುಳಬಾಗಿಲು-ಶ್ರೀನಿವಾಸಪುರ-ಅನುಸೂಚಿತ ಜಾತಿಗಳು)
5 ಕಡಿದಾಳ್ ಮಂಜಪ್ಪನವರು (ತೀರ್ಥಹಳ್ಳಿ—ಕೊಪ್ಪ)
6 ಎಚ್. ಸಿದ್ದಯ್ಯನವರು (ಸೊರಬ-ಶಿಕಾರಿಪುರ)
7 ಟಿ.ಮರಿಯಪ್ಪನವರು(ಮೈಸೂರು ಸಿಟಿ-ಉತ್ತರ)
8 ಆರ್. ಚನ್ನಿಗರಾಮಯ್ಯನವರು (ಕೊರಟಗೆರೆ-ಮಧುಗಿರಿ-ಅನುಸೂಚಿತ ಜಾತಿಗಳು)
9 ಜನಾಬ್ ಜೆ. ಮಹಮದ್ ಇಮಾಂರವರು (ಜಗಳೂರು)

ಶ್ರೀಗಳಾದ.—

10 ಆರ್. ಅನಂತರಾಮಯ್ಯರವರು (ಚಾಮರಾಜಪೇಟೆ)
11 ಎಂ. ಸಿ. ಆಂಜನೇಯರೆಡ್ಡಿಯವರು (ಚಿಂತಾಮಣಿ)
12 ಸಿ. ಎಂ. ಅಣ್ಣಯ್ಯಪ್ಪನವರು (ಗುಬ್ಬಿ)
13 ಜಿ. ಬಸಪ್ಪನವರು (ಹೊಸದುರ್ಗ)
14 ಎ. ಭೀಮಪ್ಪನಾಯಕರು (ಮೊಳಕಾಲ್ಮೂರು)
15 ಬಿ. ಎಚ್. ಬೋರಣ್ಣಗೌಡರು (ಬೇಲೂರು)
16 ಕೆ. ಎ. ಬೈರೇಗೌಡರು (ಬೆಂಗಳೂರು ಉತ್ತರ)
17 ವೈ. ಎಂ. ಚಂದ್ರಶೇಖರಯ್ಯನವರು (ಕಡೂರು)
18 ಎಂ. ಚಿಕ್ಕಲಿಂಗಯ್ಯನವರು (ಮಳವಳ್ಳಿ-ಅನುಸೂಚಿತ ಜಾತಿಗಳು)
19 ಬಿ. ಚಿಕ್ಕಣ್ಣನವರು (ಜಾವಗಲ್)
20 ಡಿ. ದೇವರಾಜ ಅರಸಿನವರು (ಹುಣಸೂರು)
21 ಜಿ. ದುಗ್ಗಪ್ಪನವರು (ಹೊಳಲ್ಕೆರೆ-ಅನುಸೂಚಿತ ಜಾತಿಗಳು)
22 ಗಂಗಾನಾಯಕರು (ಸೊರಬ-ಶಿಕಾರಿಪುರ ಅನುಸೂಚಿತ ಜಾತಿಗಳು)
23 ಎಸ್. ಗೋಪಾಲ ಗೌಡರು (ಸಾಗರ-ಹೊಸನಗರ)
24 ಡಿ.ಎಂ.ಗೋವಿಂದರಾಜು ಅವರು(ನೆಲಮಂಗಲ)
25 ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ)
26 ಟಿ. ಹನುಮಯ್ಯನವರು (ಹಿರಿಯೂರು-ಅನುಸೂಚಿತ ಜಾತಿಗಳು)

ಶ್ರೀಗಳಾದ—

27 ಸಿ. ಟಿ. ಹನುಮಂತಯ್ಯನವರು (ಪಾವುಗಡ-ಅನುಸೂಚಿತ ಜಾತಿಗಳು)
28 ಎಚ್. ಹುಚ್ಚಮಾಸ್ತಿ ಗೌಡರು (ಹುಳಿಯೂರು ದುರ್ಗ)
29 ಬಿ. ಹುಚ್ಚೇಗೌಡರು (ತುರುವೇಕೆರೆ)
30 ಡಿ. ಆರ್. ಕರೀಗೌಡರು (ಹಾಸನ)
31 ಎಸ್. ಕರಿಯಪ್ಪನವರು (ವಿರೂಪಾಕ್ಷಪುರ)
32 ಬಿ. ಟಿ. ಕೆಂಪರಾಜ್ ಅವರು (ಬೆಂಗಳೂರುದಕ್ಷಿಣ-ಅನುಸೂಚಿತ ಜಾತಿಗಳು.)
33 ಕೆ. ಲಕ್ಕಪ್ಪನವರು (ಚೆನ್ನರಾಯಪಟ್ಟಣ)
34 ಸಿ. ಹೆಚ್. ಲಿಂಗದೇವರು (ಚಿಕ್ಕನಾಯ್ಕನಹಳ್ಳಿ
35 ಎಂ. ಲಿಂಗಣ್ಣನವರು (ನಂಜನಗೂಡು)
36 ಎಸ್. ಎಂ. ಲಿಂಗಪ್ಪನವರು (ಕೃಷ್ಣರಾಜಪೇಟೆ)
37 ಎಚ್. ಸಿ. ಲಿಂಗಾರೆಡ್ಡಿಯವರು (ಮಾಲೂರು)
38 ಯು. ಎಂ. ಮಾದಪ್ಪನವರು(ಚಾಮರಾಜನಗರ)
39 ಬಿ. ಮಾಧವಾಚಾರ್ಯರು (ಭದ್ರಾವತಿ)
40 ಎಂ. ಮಾದಯ್ಯನವರು (ನಂಜನಗೂಡು-ಅನುಸೂಚಿತ ಜಾತಿಗಳ.)
41 ಮಾಲ ಮರಿಯಪ್ಪನವರು (ಪಾವುಗಡ)
42 ಎಸ್. ಎಂ. ಮರಿಯಪ್ಪನವರು (ಪಿರಿಯಾಪಟ್ಟಣ)
43 ವಿ. ಎಂ. ಮ್ಯಾಸ್ಕರೆನ್‌ಹಾಸ್‌ರವರು (ಸೇಂಟ್ ಜಾನ್‌ಹಿಲ್ಸ್)
44 ವಿ. ಮಸಿಯಪ್ಪನವರು (ಹಿರಿಯೂರು)
45 ಮುದ್ದುರಾಮಯ್ಯನವರು (ಕೊರಟಗೆರೆ-ಮಧುಗಿರಿ)
46 ಟಿ. ಎಚ್. ಮೂಡ್ಲಗಿರಿಗೌಡರು (ಕುಣಿಗಲು)
47 ಆರ್. ಮುನಿಸ್ವಾಮಯ್ಯನವರು (ಬೆಂಗಳೂರು ಉತ್ತರ-ಅನುಸೂಚಿತ ಜಾತಿಗಳು)
48 ಎ. ಮುನಿಯಪ್ಪನವರು (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ-ಅನುಸೂಚಿತ ಜಾತಿಗಳು)
49 ಎಚ್. ಸಿ. ನಾಗಯ್ಯರೆಡ್ಡಿಯವರು (ಗೌರಿಬಿದನೂರು)
50 ಟಿ. ನಾಗಪ್ಪನವರು (ತರೀಕೆರೆ)
51 ಎಸ್. ಆರ್. ನಾಗಪ್ಪಶೆಟ್ಟಿಯವರು(ಶಿವಮೊಗ್ಗ)
52 ಬಿ.ಪಿ. ನಾಗರಾಜ ಮೂರ್ತಿಯವರು(ಮಳವಳ್ಳಿ)
53 ವಿ. ಆರ್. ನಾಯ್ಡು ಅವರು (ಮಲ್ಲೇಶ್ವರ)
54 ಬಿ. ಸಿ. ನಂಜುಂಡಯ್ಯನವರು (ಕೋಲಾರ)
55 ಎ. ವಿ. ನರಸಿಂಹ ರೆಡ್ಡಿಯವರು (ಬೆಂಗಳೂರು ದಕ್ಷಿಣ)
56 ಜಿ. ನಾರಾಯಣ ಗೌಡರು (ಮುಳಬಾಗಲು-ಶ್ರೀನಿವಾಸಪುರ)
57 ನಾರಣಪ್ಪನವರು (ಚಿಂತಾಮಣಿ-ಅನುಸೂಚಿತ ಜಾತಿಗಳು)
58 ಬಿ. ವಿ. ನಾರಾಯಣರೆಡ್ಡಿಯವರು (ಬಾಗೇಪಲ್ಲಿ-ಗುಡಿಬಂಡೆ)
59 ಬಿ. ನಾರಾಯಣ ಸ್ವಾಮಿಯವರು (ಮೈಸೂರು ಸಿಟಿ ದಕ್ಷಿಣ)
60 ಬಿ. ವೈ. ನೀರೇಗೌಡರು (ಪಾಂಡವಪುರ)
61 ಎಂ. ಪಳನಿಯಪ್ಪನ್‌ರವರು (ಅಲಸೂರು)
62 ಕೆ. ಪಂಚಾಕ್ಷರಯ್ಯನವರು (ಅರಸೀಕೆರೆ)
63 ಜಿ. ಪಾಪಣ್ಣನವರು (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ)
64 ಕೆ. ಪಟ್ಟಾಭಿರಾಮನ್‌ರವರು (ಕೋಲಾರ)
65 ಕೆ. ಪ್ರಭಾಕರ್‌ರವರು (ನೆಲಮಂಗಲ-ಅನುಸೂಚಿತ ಜಾತಿಗಳು)

ಶ್ರೀಗಳಾದ—

66 ಎಚ್. ಟಿ. ಪುಟ್ಟಪ್ಪನವರು (ಹೊಸಕೋಟೆ-ಅನೆಕಲ್-ಅನುಸೂಚಿತ ಜಾತಿಗಳು)

67 ಜಿ. ಪುಟ್ಟಸ್ವಾಮಿಯವರು (ಚಿಕ್ಕಮಗಳೂರು-ಮೂಡಿಗೆರೆ-ಅನುಸೂಚಿತ ಜಾತಿಗಳು)

68 ಕೆ. ಪುಟ್ಟಸ್ವಾಮಿಯವರು (ಶ್ರೀರಂಗಪಟ್ಟಣ)

69 ಬಿ. ರಾಚಯ್ಯನವರು (ಯಳಂದೂರು-ಅನುಸೂಚಿತ ಜಾತಿಗಳು)

70 ಎಂ ರಾಜಶೇಖರ ಮೂರ್ತಿಗಳು(ಯಳಂದೂರು)

71 ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು (ಹೊಸಕೋಟೆ-ಅನೆಕಲ್)

ಶ್ರೀಗಳಾದ.—

72 ಪಿ. ಆರ್. ರಾಮಯ್ಯನವರು (ಬಸವನಗುಡಿ)

73 ಎಂ ವಿ. ರಾಮರಾಯರು (ತುಮಕೂರು)

74 ಬಿ. ಎಲ್. ರಾಮೇಗೌಡರು (ಸಿರಾ)

75 ಎಚ್. ಎಸ್. ರುದ್ರಪ್ಪನವರು (ಹೊನ್ನಾಳಿ)

76 ಬಿ. ಎಂ. ಶೀನಪ್ಪನವರು (ಕಬ್ಬನ್‌ಪೇಟೆ)

77 ಕೆ. ವಿ. ಶಂಕರ ಗೌಡರು (ಮಂಡ್ಯ)

78 ಎಂ. ಶಂಕರಲಿಂಗೇಗೌಡರು (ನಾಗಮಂಗಲ)

79 ಶಿವನಂಜೇಗೌಡರು (ಮೈಸೂರು ತಾಲ್ಲೂಕು)

80 ಜಿ. ಶಿವಪ್ಪನವರು (ಹೊಳಲ್ಕೆರೆ)

81 ಸಿದ್ದಯ್ಯ ಉರುಫ್ ಕುನ್ನಯ್ಯನವರು (ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ-ಅನುಸೂಚಿತ ಜಾತಿಗಳು)

82 ಎಚ್. ಕೆ. ಸಿದ್ದಯ್ಯನವರು (ಬೇಲೂರು - ಅನುಸೂಚಿತ ಜಾತಿಗಳು)

83 ಎಸ್. ಸಿದ್ದಪ್ಪನವರು (ಮಾಗಡಿ)

84 ಎಚ್. ಕೆ. ಶಿವರುದ್ರಪ್ಪನವರು (ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ)

85 ಎಸ್. ಶ್ರೀನಿವಾಸಐಯ್ಯಂಗಾರ್ ಅವರು (ಟಿ. ನರಸೀಪುರ)

86 ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು (ಚಿಕ್ಕಮಗಳೂರು—ಮೂಡಿಗೆರೆ)

ಶ್ರೀಗಳಾದ.—

87 ಪಿ. ಎಂ. ಸ್ವಾಮಿದೊರೈಅವರು (ಕೋಲಾರದ ಚಿನ್ನದ ಗಣಿ ಪ್ರದೇಶ - ಅನುಸೂಚಿತ ಜಾತಿಗಳು)

88 ಎಸ್. ಎಚ್. ತಮ್ಮಯ್ಯ ಉರುಫ್ ಹನುಮಂತೇಗೌಡರತಿಮ್ಮಯ್ಯನವರು (ಕೃಷ್ಣರಾಜನಗರ)

89 ಜಿ. ಎ. ತಿಮ್ಮಪ್ಪಗೌಡರು (ಅರಕಲಗೂಡು)

90 ಟಿ. ಜಿ. ತಿಮ್ಮೇಗೌಡರು (ತಿಪಟೂರು)

91 ಕೆ. ಜಿ. ತಿಮ್ಮೇಗೌಡರು (ಕನಕಪುರ)

92 ಕೆ. ಎಸ್. ವಾರ್ಸರವರು (ಕೋಲಾರ ಚಿನ್ನದ ಗಣಿ ಪ್ರದೇಶ)

93 ಎಚ್. ಕೆ. ವೀರಣ್ಣಗೌಡರು (ಮದ್ದೂರು)

94 ಡಿ. ವೆಂಕಟೇಶ್‌ರವರು (ಗಾಂಧೀನಗರ)

---

## Appointment of Leader of the House.

Mr. SPEAKER.—The next item on the list of business is the election of the Speaker. Before we proceed to that business the Secretary will read the letter from Government appointing the Leader of the House.

**Secretary.**—"No. L. D. 440—L.A. 25-52-1, dated, Bangalore, the 10th June 1952 from the Legal Remembrancer and Secretary to Government Law Department.

*Subject*:—Leader of the House in the Assembly.

I am directed to state that Government have decided that Sri K. Hanuanthaiya, B.A., LL.B., Chief Minister, will be the Leader of the Mysore Legislative Assembly."

---

## Election of Speaker.

Mr SPEAKER.—Within the time prescribed by the rules, two nominations have been received. The candidates proposed are—

1. Sri B. Gopala Gowda and
2. Sri H. Siddaiya

Sri Mulka Govinda Reddy has proposed the name of Sri Gopala Gowda and Sri B. Rachiah has seconded the nomination. Sri A. Bheemappa Naik has proposed Sri H. Siddaiya and Sri R. Chennigaramiah has seconded the nomination. The nominations are in order and a ballot has therefore to take place in accordance with the Rules. In order to avoid confusion and to ensure a satisfactory and quick ballot I propose to adopt the following procedure. The Secretary will call out the names of the members one by one. Of course, only those who have taken the Oath are entitled to vote. As soon as a member's name is called he will kindly come to the Secretary's table, receive the ballot paper and proceed to the compartment set apart for marking the paper. After marking the paper and folding it, he will return to the Secretary's table and deposit the ballot paper in the box provided for the purpose.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—ಹೆಸರುಗಳನ್ನು ಕೂಗಿದಾಗ ಅವರು ಇಲ್ಲದಿದ್ದರೆ ಮತ್ತೆ ಅವ ಹೆಸರುಗಳನ್ನು ಕೂಗುತ್ತೀರಾ ?

Mr. SPEAKER.—ಹೌದು. For th counting of votes I appoint Sriyut B. P. Nagaraja Murthy and M. V. Ram

(MR. SPEAKER)

Rao as Tellers. I request them to kindly assist the Secretary in counting the votes. Shall we fix the time?

ಶ್ರೀ ಎಂ. ಮಾದಯ್ಯನವರು (ನಂಜನಗೂಡು-ಅನುಸೂಚಿತ ಜಾತಿಗಳು).—ಸ್ವಾಮಿ, ಯಾರನ್ನಾದರೂ ಕೂಗಿದಾಗ ಅವರು ಸಭೆಯಲ್ಲಿಲ್ಲದಿದ್ದರೆ ಅವರು ಅನಂತರ ಬಂದು ಓಟು ಮಾಡಬಹುದೇ? ಹಾಗಿದ್ದರೆ, ಓಟು ಮಾಡುವುದಕ್ಕೆ ಎಲ್ಲಿಯವರೆಗೆ ಅವಕಾಶವಿದೆಯೆಂದು ಕಾಲವನ್ನು ಗೊತ್ತುಮಾಡುವುದು ಒಳ್ಳೆಯದು.

ಅಧ್ಯಕ್ಷರು.—ಆ ಮೇಲೆಯೂ ಬಂದು ವೋಟು ಮಾಡಬಹುದು, ಇದಕ್ಕಾಗಿ ಒಂದು ಕಾಲವನ್ನು ಗೊತ್ತು ಮಾಡೋಣ.

ಶ್ರೀ ಎಂ. ಮಾದಯ್ಯನವರು.—ಸಾಮಾನ್ಯವಾಗಿ ಚುನಾವಣೆಯ ಫಲಿತಾಂಶವನ್ನು ತಿಳಿಯಪಡಿಸಿದ ಮೇಲೆ, ನಿವೃತ್ತರಾಗುವ ಅಧ್ಯಕ್ಷರ ವಿಷಯವಾಗಿಯೂ ಮತ್ತು ಹೊಸದಾಗಿ ಚುನಾಯಿತರಾಗುವ ಅಧ್ಯಕ್ಷರ ವಿಷಯವಾಗಿಯೂ ಸಭೆಯ ಅಭಿನಂದನೆಗಳನ್ನು ಅರ್ಪಿಸುವುದು ಸ್ವಾಭಾವಿಕ. ಆದ್ದರಿಂದ ಈ ದಿನವೇ ಅಭಿನಂದನಾ ಭಾಷಣಗಳನ್ನು ಅರ್ಪಿಸಲು ಅವಕಾಶವಿರುವಂತೆ ಮೂರುಘಂಟೆಯೊಳಗೆ ವೋಟಿಂಗ್ ಕಾರ್ಯಕ್ರಮ ಮುಗಿಯುವಂತೆ ಏರ್ಪಡಿಸಬೇಕೆಂದು ಕೇಳುತ್ತೇನೆ.

**Janab J. MOHAMED IMAM** (Jagalur).—It would be better if a provisional calendar for the election is fixed up.

**Mr. SPEAKER**—We shall say that the election will be up to 3 P.M.

**Janab J. MOHAMED IMAM.**—So till 3 P.M. we will have time and the declaration of result will be after 3 P.M. What about the proposal made by Sri M. Madiah just now?

**Mr. SPEAKER.**—That also will be done to-day itself.

**Janab J. MOHAMED IMAM.**—The taking of Oath took nearly 3 hours; this voting also may take another 3 hours. So it is better that the time for the election is extended to be on the safe side. It may be extended by half an hour, if the Chair agrees

**Mr. SPEAKER.**—I have no objection to extend the time up to 3-30 P.M.

[*The election then took place by ballot. Votes were counted and the result was communicated to the Speaker*].

**Mr. SPEAKER.**—The result of the ballot is as follows:—

Sri Gopala Gowda has secured 14 votes and

Sri H. Siddaiya has secured 79 votes. (Applause)

I therefore declare that Sri H. Siddaiya has been duly elected Speaker of the Assembly.

It is with great pleasure that I now call upon Sri H. Siddaiya to occupy the Speaker's Chair. I request the proposer and the seconder to lead him to the Chair.

(*Sri H. Siddaiya was led to the dais by Sri A. Bheemappa Naik and Sri R. Chennigaramiah and was formally installed in the Chair by Sri V. Venkatappa*).

## Felicitations to the Speaker.

*ಶ್ರೀ ಕೆ. ಹನುಮಂತಯ್ಯನವರು (ಸಭಾ ನಾಯಕರು).—ಸ್ವಾಮಿ, ಈ ಸಭೆಯಲ್ಲಿ ಮೊಟ್ಟಮೊದಲನೆಯ ಭಾಷಣ ನನ್ನದು. ಹಾಗೂ ನನ್ನ ಮೊಟ್ಟಮೊದಲನೆಯ ಭಾಷಣ ತಮ್ಮನ್ನು ಅಭಿನಂದಿಸುವುದು. ಇದು ನನಗೆ ಬಹಳ ಸಂತೋಷಕರವಾದ ವಿಷಯ. ತಮ್ಮ ಜೀವಮಾನ ದೇಶ ಸೇವೆಗಾಗಿ ಮುಡುಪಾಗಿದೆ. ಈ ರೀತಿ ದೇಶ ಸೇವೆಗಾಗಿ ತಮ್ಮ ಜೀವಮಾನವನ್ನು ಮುಡುಪಾಗಿಟ್ಟ ಕೆಲವಂದಿ ಮೈಸೂರಿನ ಮಹನೀಯರಿದ್ದಾರೆ. ಆ ಮಹನೀಯರಲ್ಲಿ ತಾವು ಶ್ರೇಷ್ಠತಮ ವರ್ಗಕ್ಕೆ ಸೇರಿದವರು. ಮೊದಲು ತಾವು ವಕೀಲ ವೃತ್ತಿಯಲ್ಲಿದ್ದಿರಿ. ಆ ವೃತ್ತಿಯಲ್ಲಿದ್ದಾಗಲೇ ತಾವು ದೇಶಸೇವಾ ರಂಗಕ್ಕಿಳಿದಿರಿ. ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಎದೆಗಾರಿಕೆಯಿಂದ ನುಗ್ಗಿದ ವೀರರಲ್ಲಿ ತಾವು ಪ್ರಥಮ ಶ್ರೇಣಿಯವರು. ತಾತ್ಕಾಲಿಕವಾಗಿ ತಾವು ಬಹಳ ಕಷ್ಟ ಕಾಲದಲ್ಲಿ ಕಾಂಗ್ರೆಸ್ ಅಧ್ಯಕ್ಷ ಪೀಠವನ್ನಲಂಕರಿಸಿದ್ದಿರಿ. ಕಾಂಗ್ರೆಸ್ ಸೇವೆಯಲ್ಲಿ ತಮಗಿಂತಲೂ ಹೆಚ್ಚಾಗಿ ಕಷ್ಟಪಟ್ಟರತಕ್ಕವರು ಬಹುಶಃ ನಮ್ಮಲ್ಲಿಲ್ಲವೆಂದರೆ ಉತ್ಪ್ರೇಕ್ಷೆಯಲ್ಲ. ಸ್ವಾತಂತ್ರ್ಯ ಬಂದ ಹೊಸದರಲ್ಲಿ ತಾವು ಮಂತ್ರಿ ಮಂಡಲದಲ್ಲಿ ಸೇರಿ ರೆವಿನ್ಯೂ ಮಂತ್ರಿಗಳಾಗಿ ಕೆಲಸ ಮಾಡಿದಿರಿ. ಈಗ ಅತ್ಯಂತ ಗೌರವಯುತವಾದುದೂ ಮರ್ಯಾದೆಯಿಂದ ಕೂಡಿದುದೂ ಮತ್ತು ಎಲ್ಲ ಪಕ್ಷಗಳಲ್ಲಿಯೂ ವಿಶ್ವಾಸವನ್ನುಸಂಪಾದಿಸಿ ಕೆಲಸ ಕಾರ್ಯಗಳನ್ನು ನಡೆಸಬೇಕಾದ ಗುರುತರ ಜವಾಬ್ದಾರಿಯುತವೂ ಆದ ಸ್ಪೀಕರ್ ಕೆಲಸವನ್ನು ಈ ಸಭೆಯವರು ತಮಗೆ ವಹಿಸಿದ್ದಾರೆ. ಈ ರೀತಿ ಬಹು ಕಾಲದಿಂದಲೂ ಜವಾಬ್ದಾರಿಯುತ ಸ್ಥಾನಗಳಲ್ಲಿದ್ದುಕೊಂಡು ಸಮರ್ಪಕವಾಗಿ ಕೆಲಸ ಮಾಡಿದ ತಮ್ಮನ್ನು ಈ ಸ್ಥಾನಕ್ಕೆ ಚುನಾಯಿಸಿದುದು ಸರ್ವವಿಧದಲ್ಲೂ ಸೂಕ್ತವಾಗಿದೆಯೆಂಬುದು ನನ್ನ ಅಭಿಪ್ರಾಯ. ಶಾಸನ ಸಂಪ್ರದಾಯದ ಪ್ರಕಾರ ನಾನು ಈ ದಿವಸ ಈ ಸಭೆಯ ನಾಯಕನಾಗಿದ್ದೇನೆ, ಹಾಗೂ ಕಾಂಗ್ರೆಸ್ ಪಕ್ಷದ ನಾಯಕನಾಗಿದ್ದೇನೆ; ಈ ಉಭಯ ಸ್ಥಾನಗಳಿಂದಲೂ ಹೃತ್ಪೂರ್ವಕವಾದ ಅಭಿನಂದನೆಗಳನ್ನು

*Speeches asterisked have not been revised by the Members concerned.

ತಮ್ಮಲ್ಲಿ ಸಲ್ಲಿಸಿ ತಮ್ಮ ಕೆಲಸ ಕಾರ್ಯಗಳಲ್ಲಿ ಸಂಪೂರ್ಣ ಸಹಕಾರವನ್ನು ನೀಡುತ್ತೇನೆಂಬ ಭರವಸೆಯನ್ನು ತಮಗೆ ಕೊಡುತ್ತೇನೆ.

ತಾವು ಕಾಂಗ್ರೆಸ್ ಪಕ್ಷದ ಸದಸ್ಯರೇನೋ ಹೌದು. ಕಾಂಗ್ರೆಸ್ ಪಕ್ಷವಲ್ಲರತಕ್ಕ ಒಬ್ಬ ಸದಸ್ಯರಿಗೆ ಈ ರೀತಿ ಒಂದು ಜವಾಬ್ದಾರಿ ಸ್ಥಾನ ದೊರೆತಿರುವುದು ನಮಗೇನೋ ಹೆಮ್ಮೆಯ ವಿಷಯ. ಆದರೂ ಕಾಂಗ್ರೆಸ್ ಪಕ್ಷಕ್ಕೆ ಸೇರದೆ ಇರತಕ್ಕವರಲ್ಲಿ ಬಹುಶಃ ಕಾಂಗ್ರೆಸ್ ಪಕ್ಷದ ವಾತಾವರಣದಲ್ಲಿ ಬೆಳೆದ ನೀವು ನಿಷ್ಪಕ್ಷಪಾತವಾಗಿ ವರ್ತಿಸುತ್ತೀರೋ ಇಲ್ಲವೋ ಎಂಬ ಅನುಮಾನ ಯಾರಲ್ಲಾದರೂ ಇದ್ದರೆ ಅದಕ್ಕೆ ಕಾರಣವಿಲ್ಲ. ಇದಕ್ಕೆ ಉದಾಹರಣೆ ಅಥವಾ ರುಜುವಾತಾಗಿ ಒಂದು ವಿಷಯ ಹೇಳಬೇಕಾಗಿದೆ. ಹಿಂದೆ ನೀವು ಮಂತ್ರಿಗಳಾಗಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾಗ ಆಗಿರುವ ರಿಕಾರ್ಡುಗಳಲ್ಲಿರುವುದನ್ನು ನೋಡಿದರೆ, ಕಾಂಗ್ರೆಸ್‌ನವರಿಗೆ ಎಷ್ಟು ಸಹಾಯ ಮಾಡಿದ್ದೀರೋ ಅದಕ್ಕಿಂತ ಹೆಚ್ಚಾಗಿ ಕಾಂಗ್ರೆಸೇತರರಿಗೆ ಮಾಡಿದ್ದೀರೆಂಬುದು ವ್ಯಕ್ತವಾಗುತ್ತದೆ. ಇದನ್ನು ನಾನು ಕಣ್ಣಾರೆ ಕಂಡಿದ್ದೇನಾದ್ದರಿಂದ ಹೆಚ್ಚಿನ ರುಜುವಾತು ಅನಾವಶ್ಯಕ. ಅನೇಕರಿಗೂ ಇದು ಗೊತ್ತಿದೆ. ಮಂತ್ರಿಗಳಾಗಿದ್ದಾಗಲೂ ಪಾರ್ಟಿ ಸದಸ್ಯರಾಗಿ ವಿರೋಧ ಪಕ್ಷದವರೊಡನೆ ಹೋರಾಡಬೇಕಾಗಿ ಬಂದಿದ್ದ ವಾತಾವರಣದಲ್ಲಿಯೂ ನಿಷ್ಪಕ್ಷಪಾತ ಮನೋಭಾವವನ್ನು ತೋರಿಸಿರತಕ್ಕ ತಾವು ಈ ದಿವಸ ಇದೇ ನಿಷ್ಪಕ್ಷಪಾತ ಭಾವನೆಯ ಪರಿಣಾಮವನ್ನು ಸಭಾ ಸದಸ್ಯರೆಲ್ಲರಲ್ಲಿಯೂ ಉಂಟು ಮಾಡತಕ್ಕ ಯೋಗ್ಯತೆ, ಸೌಜನ್ಯ, ಸ್ವತಂತ್ರ ಮನೋಭಾವ, ಸತ್ಯವಾದ ನಡತೆ ಇವುಗಳನ್ನು ಹೊಂದಿದ್ದೀರಿ ಎಂಬುದಾಗಿ ಸಾರಿ ಹೇಳುತ್ತೇನೆ. ಇಂತಹ ಗುಣ ತಮ್ಮಲ್ಲಿ ಇಲ್ಲವೆಂದು ಕಂಡುಬಂದಿದ್ದರೆ ಕಾಂಗ್ರೆಸ್ ಪಕ್ಷದವರು ತಮ್ಮನ್ನು ಈ ಪೀಠಕ್ಕೆ ಕುಳ್ಳಿರಿಸುತ್ತಿರಲಿಲ್ಲವೆಂದು ಹೇಳಿದರೆ ಇದೊಂದು ಟೀಕೆ ಎಂದು ಯಾರೂ ಭಾವಿಸಲಾರರು. ಎದುರು ಪಕ್ಷದವರಿಗೂ ಕಾಂಗ್ರೆಸ್ ಪಕ್ಷದವರಿಗೂ ಇತರ ಸದಸ್ಯರಿಗೂ ಈ ರೀತಿ ಒಂದು ವಿಶ್ವಾಸ ಬೆಳೆಯಲಿ ಎಂಬುದಕ್ಕಾಗಿ ಈ ವಾದವನ್ನು ಸಭೆಯ ಮುಂದಿಟ್ಟಿದ್ದೇನೆ. ತಮ್ಮ ಗುರುತರವಾದ ಜವಾಬ್ದಾರಿಯಲ್ಲಿ ಪರಮಾತ್ಮನು, ಸರ್ವಸಮರ್ಪಕವಾಗಿ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುವುದಕ್ಕೆ ತಕ್ಕ ಎಲ್ಲ ಗುಣಗಳನ್ನೂ ತಮಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕರುಣಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ನನ್ನ ಭಾಷಣವನ್ನು ಮುಗಿಸುವುದಕ್ಕೆ ಮೊದಲು ಸುಮಾರು ನಾಲ್ಕು ವರ್ಷಗಳ ಕಾಲ ಈ ಸಭೆಯ ಅಧ್ಯಕ್ಷರ ಕೆಲಸವನ್ನು ಮಾಡಿದ ಶ್ರೀಮಾನ್ ವೆಂಕಟಪ್ಪನವರ ಉಪಕಾರವನ್ನು ಕೂಡ ನಾವು ಈ ಸಂದರ್ಭದಲ್ಲಿ ಸ್ಮರಿಸಬೇಕಾಗಿದೆ. ಅವರ ಗಾಂಭೀರ್ಯ ಘನತೆ ಸೌಜನ್ಯಗಳು ಸಭಾ ಕಾರ್ಯಕಲಾಪಗಳನ್ನು ಬಹಳ ಯಶಸ್ವಿಯಾಗಿ ನಡೆಯುವಂತೆ ಮಾಡಿವೆ. ಅನೇಕ ಸತ್ ಸಂಪ್ರದಾಯಗಳನ್ನು ಅವರು ಪೋಷಣೆ ಮಾಡಿದ್ದಾರೆ. ಅವರಿಗೆ ನಾನು ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡರು (ಸಾಗರ–ಹೊಸನಗರ).—ಸ್ವಾಮಿ, ಈಗ ತಾನೆ ತಾವು ಈ ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದೀರಿ. ಅದಕ್ಕಾಗಿ ನಾನು ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ ಮತ್ತು ನಾನು ಈ ಅಧ್ಯಕ್ಷಸ್ಥಾನದ ಸ್ಪರ್ಧೆಗೆ ನಿಲ್ಲಲು ಕಾರಣವೇನೆಂಬ ಬಗ್ಗೆ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ. ನಾನು ನನ್ನ ಸೋಲನ್ನು ಬಹಳ ಸಂತೋಷದಿಂದ ಒಪ್ಪಿಕೊಂಡಿದ್ದೇನೆ. ನಾನು ನನ್ನ ಒಂದು ಕರ್ತವ್ಯವನ್ನು ಸಲ್ಲಿಸಿದ್ದೇನೆಂಬ ತೃಪ್ತಿ ನನಗುಂಟಾಗಿದೆ. ಈ ಸಭೆಯು ಒಂದಕ್ಕಿಂತ ಹೆಚ್ಚಿನ ರಾಜಕೀಯ ಪಕ್ಷಗಳಿಂದ ಕೂಡಿದ್ದಾಗಿದೆ. ಮೊಟ್ಟಮೊದಲನೆಯ ಬಾರಿಗೆ ನೂತನ ರಾಜ್ಯಾಂಗ ವಿಧಿ ದ್ವಾರ ಈ ಸಭೆಯು ಸ್ಥಾಪಿಸಲ್ಪಟ್ಟಿದ್ದಾಗಿರುತ್ತದೆ. ಮೈಸೂರು ದೇಶದ ಪ್ರಜೆಗಳು ಮೊದಲನೆಯ ಬಾರಿಗೆ ಸದಸ್ಯರನ್ನು ವಯಸ್ಕರ ಮತದಾನ ಪದ್ಧತಿಯ ಮೇರೆಗೆ ಆರಿಸಿ, ಈ ಸಭೆಗೆ ಕಳುಹಿಸಿದ್ದಾರೆ. ಇನ್ನು ಮುಂದಕ್ಕೆ ಈ ಸಭೆಯು ಜವಾಬ್ದಾರಿಯಿಂದ, ನೂತನ ರಾಜ್ಯಾಂಗದ ವಿಧಿಗನುಸಾರವಾಗಿ, ರಾಜ್ಯ ಸೂತ್ರಗಳನ್ನು ನಡೆಸಿಕೊಂಡು ಹೋಗಬೇಕಾಗಿದೆ. ಈ ಬಗ್ಗೆ ನಾವೆಲ್ಲರೂ ಒಂದು ಸತ್ಸಂಪ್ರದಾಯವನ್ನು ಬೆಳಸಿಕೊಂಡು ಬರಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯ. ಪ್ರಜಾಪ್ರಭುತ್ವ ತತ್ವಗಳಿಗನುಗುಣವಾಗಿ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡುವುದು ಅಗತ್ಯ. ವಿರೋಧ ಪಕ್ಷದ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆ ಕೊಡಬೇಕು. ನನ್ನ ಸ್ಪರ್ಧೆ ಸಾಂಕೇತಿಕ, ಹಾಗೂ ತಾತ್ವಿಕ.

ಈ ಸಭೆಯಲ್ಲಿ ಬಹುಸಂಖ್ಯೆಯಲ್ಲಿರುವ ಕಾಂಗ್ರೆಸ್ಸಿಗರು, ಕಾಂಗ್ರೆಸೇತರ ಸದಸ್ಯರ ಅಭಿಮತವನ್ನು ಪೂರ್ವಭಾವಿಯಾಗಿ ಪಡೆಯದ ಕಾರಣ ನಾನು ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದೆನು. ಆದರೆ ನಾನು ಈ ಸ್ಪರ್ಧೆಯಲ್ಲಿ ಗೆಲ್ಲುವುದಿಲ್ಲವೆಂಬ ಅಂಶ ಖಚಿತವಾಗಿ ಮೊದಲೇ ನನಗೆ ಗೊತ್ತಿತ್ತು. ಆದರೆ ಕಡಮೆ ಸಂಖ್ಯೆಯಲ್ಲಿರತಕ್ಕವರೂ ಆರಿಸಿ ಬಂದಿರತಕ್ಕ ದೃಷ್ಟಾಂತಗಳು ನಮ್ಮ ಮುಂದೆ ಅನೇಕ ಇವೆ. ಉದಾಹರಣೆಗಾಗಿ ಹೇಳಬೇಕೆಂದರೆ ಬೆಂಗಳೂರು ನಗರಾಧ್ಯಕ್ಷರ ಚುನಾವಣೆ ಮತ್ತು ಹೈದರಾಬಾದ್ ಡೆಪ್ಯುಟಿ ಸ್ಪೀಕರ್ ಅವರ ಚುನಾವಣೆ, ಹೀಗೆ ಅನೇಕವಿವೆ. ಆದರೆ ಇಂದಿನ ಚುನಾವಣೆಯಲ್ಲೂ ಕೂಡ ಅಂಥ ಒಂದು ಸನ್ನಿವೇಶ ಉಂಟಾಗಬಹುದೆಂಬ ನಿರೀಕ್ಷೆಯನ್ನು ಮಾಡಿಕೊಂಡು ನಾನು ಸ್ಪರ್ಧೆಗೆ ನಿಂತಿರಲಿಲ್ಲ. ಸೋತುಹೋದೆನೆಂಬ ದುಃಖ ಸ್ವಲ್ಪ ಮಾತ್ರವೂ ನನಗಿಲ್ಲ. ಇನ್ನೂ ಈ ಬಗ್ಗೆ ಕಾರಣಗಳನ್ನು ಕೊಡಬೇಕೆಂದರೆ ಮದ್ರಾಸಿನಲ್ಲಿ ಯಾವ ರೀತಿ, ಸಭಾಧ್ಯಕ್ಷರನ್ನು ಆರಿಸಿಕೊಳ್ಳುವಾಗ, ಪಕ್ಷಾತೀತರಾದಂಥ ಒಬ್ಬ ವ್ಯಕ್ತಿಯನ್ನು ಆರಿಸಿದರೋ, ಅದರಂತೆ ಇಲ್ಲಿಯೂ ಕೂಡ ಮಾಡಿದರೆ ದೇಶದ ಏಳಿಗೆಗೂ ಮತ್ತು ಎಲ್ಲ ವಿವಿಧ ಪಕ್ಷಗಳಿಗೂ ಹೆಚ್ಚಿನ ಸಹಾಯವಾಗುತ್ತದೆಂಬುದೂ ಒಂದು ವಿಷಯ.

ಮತ್ತೊಂದು ವಿಷಯವೇನೆಂದರೆ ತಮಗೆ ತಮ್ಮ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುವುದರಲ್ಲಿ ಕೆಲವು ಸಂದರ್ಭಗಳಲ್ಲಿ ತಾವು ಪಕ್ಷಪಾತ ಭಾವನೆಯಿಂದ ವರ್ತಿಸಬಹುದೆಂಬ ಶಂಕೆಗೂ ಅವಕಾಶ ಉಂಟಾಗಬಹುದೋ ಏನೋ; ಆದರೆ ಈ ಶಂಕೆಗೆ ಎಷ್ಟು ಮಾತ್ರ ಆಧಾರವಿದೆ ಅಥವಾ ಇಲ್ಲ ಎಂಬುದನ್ನು ಮುಂದಕ್ಕೆ ತಾವು ಪರಿಹರಿಸಬೇಕಾಗಿದೆ. ಕಾರಣ ತಾವು ನಾಲ್ಕುವರೆ ವರ್ಷಗಳ ಕಾಲ ಮಂತ್ರಿಗಳಾಗಿದ್ದುಕೊಂಡು, ದೇಶಾಭ್ಯುದಯದ ಕೆಲಸ ಕಾರ್ಯಗಳನ್ನು ಬಹಳ ಯಶಸ್ವಿಯಾಗಿ ನಡೆಸಿಕೊಂಡು ಬಂದು ಮೊನ್ನೆ ತಾನೆ ನಿವೃತ್ತಿಹೊಂದಿದ್ದೀರಿ. ತಾವು ಇಂದು ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಆರಿಸಿ ಬಂದಿದ್ದೀರಿ. ತಮ್ಮ ವ್ಯಕ್ತಿತ್ವಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಏಳಬಹುದಾದ ಸಂಶಯಗಳಿಗೆ ಅವಕಾಶವಿಲ್ಲದಂತೆ ತಾವು ನಡೆದುಕೊಳ್ಳುವಿರೆಂಬ ಭರವಸೆ ನನಗಿದೆ. ಅಂಥ ವಿಷಯಗಳನ್ನು ತಮ್ಮ ಮನಸ್ಸಿಗೆ ಅಂಟಿಸಿಕೊಳ್ಳದೆ ತಾವು

(ಶ್ರೀ ಎಸ್. ಗೋಪಾಲಗೌಡರು.)

ಸದಾ ಸತ್ಯವನ್ನೇ ಎತ್ತಿ ಹಿಡಿಯುತ್ತೀರೆಂದು ನಂಬಿದ್ದೇನೆ.

ಈ ಸಭೆಗೆ ನನ್ನನ್ನು ಅಧ್ಯಕ್ಷನಾಗಿ ಆರಿಸಿ ಬರಲು ನನ್ನ ಹೆಸರನ್ನು ಸೂಚಿಸಿದ ಮತ್ತು ನನಗೆ ನೆರವು ನೀಡಿದ ನನ್ನ ಮಿತ್ರರೆಲ್ಲರಿಗೂ ನಾನು ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕೊನೆಯದಾಗಿ ನಾನು ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಈ ದಿನ ತಾವು ನಮ್ಮೆಲ್ಲರ ಸಹಕಾರವನ್ನು ಬಯಸುವವರಾಗಿದ್ದೀರಿ. ದೇಶದ ಮತ್ತು ಜನತೆಯ ಹಿತದೃಷ್ಟಿಯಿಂದ ತಮ್ಮ ಮೇಲೆ ಒಂದು ಗುರುತರವಾದ ಜವಾಬ್ದಾರಿ ಬಿದ್ದಿದೆ. ಅದನ್ನು ನಿರ್ವಹಿಸಲು ನಾವುಗಳು ಯಾವತ್ತೂ ತಮಗೆ ನಮ್ಮ ಬೆಂಬಲ ನೀಡಲು ಸದಾ ಸಿದ್ಧರಾಗಿದ್ದೇವೆ. ನಮ್ಮೆಲ್ಲರ ಬೆಂಬಲ ಯಾವತ್ತೂ ತಮಗೆ ಇದ್ದೇ ಇರುತ್ತದೆಂಬ ಅಂಶವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿ ನಾನು ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮೇಲಾಗಿ ತಾವು ನನಗಿಂತಲೂ ವಯೋವೃದ್ಧರು, ಹೆಚ್ಚಿನ ಅನುಭವಶಾಲಿಗಳು, ಮೇಧಾವಿಗಳು ಆಗಿರುವುದರಿಂದ ನನಗಿಂತಲೂ ತಾವು ಈ ಸ್ಥಾನಕ್ಕೆ ಅತ್ಯಂತ ಅರ್ಹರಿದ್ದೀರಿ. ಅದಕ್ಕಾಗಿ ಮತ್ತೊಮ್ಮೆ ನಾನು ತಮ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮದ್ದೂರು).—ಸ್ವಾಮಿ, ಈ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿರುವಂಥ ಈ ಸಂದರ್ಭದಲ್ಲಿ ತಮ್ಮನ್ನು ಅಭಿನಂದಿಸುವುದಕ್ಕೆ ನನಗಂತೂ ಬಹಳ ಸಂತೋಷವಾಗುತ್ತದೆ. ತಮ್ಮ ಜೊತೆಯಲ್ಲಿ ದುಡಿಯುವ ಅವಕಾಶ, ಸುಯೋಗ ನನಗೆ ಅನೇಕ ವರ್ಷಗಳ ಕಾಲ ಲಭಿಸಿದುದು ಈಗ ನನ್ನ ಜ್ಞಾಪಕಕ್ಕೆ ಬರುತ್ತದೆ. ತಾವು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಆ ಮಹಾ ಸಂಸ್ಥೆಯ ಕಾರ್ಯದರ್ಶಿಯಾಗಿಯೂ, ತಮ್ಮ ಒಡನಾಡಿಯಾಗಿಯೂ ನಾನು ಕೆಲಸ ಮಾಡಿದ್ದೇನೆ. ದೇಶಕ್ಕೆ ಸ್ವಾತಂತ್ರ್ಯ ಲಭಿಸಬೇಕು, ಪ್ರಜಾಪ್ರಭುತ್ವ ಸಂಸ್ಥಾನದಲ್ಲಿ ಸ್ಥಾಪಿತವಾಗಬೇಕು ಎಂಬ ಉದ್ದೇಶದಿಂದ ಪ್ರಾರಂಭವಾಗಿದ್ದ ಹೋರಾಟದಲ್ಲಿ ತಾವು ಭಾಗವಹಿಸಿ ಅದರಿಂದ ಪಟ್ಟ ತೊಂದರೆ ಕಷ್ಟಗಳನ್ನು ಅನುಭವಿಸುತ್ತಿದ್ದುದು ಇಂದೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ನಮ್ಮ ಹಳ್ಳಿಗಾಡಿನಲ್ಲಿ ಒಂದು ಗಾದೆ ಇದೆ—ಯಾರಾದರೂ ಒಂದು ಉಚ್ಚ ಸ್ಥಾನವನ್ನು ಸಂಪಾದಿಸಿದರೆ, ಒಂದು ಗೌರವ ಮತ್ತು ಯೋಗ್ಯತೆ ಪಡೆದರೆ, ಅದಕ್ಕಾಗಿ ಅವರು ಬಹಳ ರಾಗಿ ಬೀಸಿರಬೇಕೆಂದು ಹೇಳುತ್ತಾರೆ. ತಾವು ಅಕ್ಷರಶಃ ಬಹಳ ರಾಗಿ ಬೀಸಿದ್ದೀರೆಂಬುದನ್ನೂ ಕಣ್ಣಾರೆ ನೋಡಿದ್ದೇನೆ. ಅದನ್ನು ನೋಡಿ ಮರುಗಿದ್ದೇನೆ. ಹೀಗೆ ತಾವು ಜೈಲಿನಲ್ಲಿ ಕಷ್ಟತರವಾದ ಕೆಲಸಗಳನ್ನು ಮಾಡುತ್ತಿದ್ದಾಗ ಮುಂದೆ ತಮಗೆ ಮಂತ್ರಿ ಪದವಿ ಸಿಕ್ಕುತ್ತದೆ ಅಥವಾ ಶಾಸನ ಸಭೆಯ ಅಧ್ಯಕ್ಷ ಸ್ಥಾನ ದೊರೆಯುತ್ತದೆ ಎಂದು ನಿರೀಕ್ಷಿಸಿರಲಿಲ್ಲ. ದೇಶ ಸ್ವತಂತ್ರವಾಗಬೇಕು, ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕು ಎಂಬ ಒಂದೇ ಧ್ಯೇಯದಿಂದ ಹೋರಾಡಿ, ಶಿಕ್ಷೆಯನ್ನು ಅನುಭವಿಸಿ ಬಹಳವಾಗಿ ಕಷ್ಟಪಟ್ಟು ತೊಂದರೆಗಳನ್ನು ಅನುಭವಿಸಿದ್ದೀರಿ. ಆ ನಿಸ್ವಾರ್ಥ ಸೇವೆಯ ಪ್ರತಿಫಲವೋ ಎಂಬಂತೆ ದೇವರು ದಯೆ ತೋರಿ ತಮಗೆ ಈ ಸ್ಥಾನವನ್ನು ಒದಗಿಸಿದ್ದಾನೆಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲ.

ಸ್ವಾಮಿ, ಸಭಾನಾಯಕರು ನಿಮ್ಮ ನಿಷ್ಪಕ್ಷಪಾತವಾದ ಸ್ವಭಾವದ ಬಗ್ಗೆ ಒಂದು ವಿಚಾರ ಹೇಳಿದರು. ಅವರು ಈ ದಿನ ಈ ಸಭೆಯ ನಾಯಕರಾಗಿಯೂ, ಸಂಸ್ಥಾನದ ಆಡಳಿತಾಧಿಕಾರ ವಹಿಸಿರುವ ಮುಖ್ಯ ಮಂತ್ರಿಯಾಗಿಯೂ ಇದ್ದಾರೆ. ಮುಖ್ಯ ಮಂತ್ರಿ ಸ್ಥಾನವನ್ನು ಸ್ವಲ್ಪ ದಿನಗಳಿಂದೀಚೆಗೆ ಅವರು ಅಲಂಕರಿಸಿದ್ದರೂ ಸರ್ಕಾರದ ಕಾರುಬಾರು, ಹಿಂದಿನ ಆಡಳಿತದ ವಿಚಾರ ಅವರಿಗೆ ಮಂದಟ್ಟಾಗಿರಬೇಕು. ನೀವು ಮಂತ್ರಿಯಾಗಿದ್ದ ನಾಲ್ಕೈದು ವರ್ಷಗಳು ಪಕ್ಷಾತೀತವಾಗಿ ಎಷ್ಟು ಮಟ್ಟಿಗೆ ನಡೆದಿದ್ದೀರಿ, ಕಾಂಗ್ರೆಸ್ ಮತ್ತು ಇತರರು ಎಂಬ ಭೇಧ ಭಾವವಿಲ್ಲದೆ ಎಲ್ಲರ ಬಗ್ಗೆಯೂ ಸಹಾನುಭೂತಿಯನ್ನು ತೋರಿಸಿದ್ದೀರಿ ಎಂಬುದನ್ನು ರಿಕಾರ್ಡಿನಲ್ಲಿ ನೋಡಿದ್ದೇನೆ ಎಂದು ಅವರು ಹೇಳಿದ್ದಾರೆ. ಅವರು ಹಿಂದಿನ ಸರ್ಕಾರ ನಡೆಯುತ್ತಿದ್ದ ಕಾಲದಲ್ಲಿ ಪಾರ್ಲಿಮೆಂಟ್ ಸದಸ್ಯರಾಗಿದ್ದುದರಿಂದ ನಮ್ಮ ಹಾಗೆ ನಿಮ್ಮ ವಿಚಾರದಲ್ಲಿ ವ್ಯಕ್ತಿಶಃ ಅನುಭವ ಅವರಿಗೆ ಇರಲಿಲ್ಲ. ಆದ್ದರಿಂದ ರಿಕಾರ್ಡು ನೋಡಿ ಹಾಗೆ ಹೇಳಿದ್ದಾರೆ. ನಾನು ತಮ್ಮ ಒಡನಾಡಿಯಾಗಿಯೂ ಈ ಸಭೆಯ ಸದಸ್ಯನಾಗಿಯೂ ತಮ್ಮ ವಿಚಾರ ತಿಳಿದಿದ್ದೇನೆ. ಹೊರಗಡೆ ತಮ್ಮ ಪ್ರವಾಸ ಕಾಲದಲ್ಲಿ ಅಥವಾ ತಾವು ಮಂತ್ರಿ ಸ್ಥಾನವನ್ನಲಂಕರಿಸಿದ್ದಾಗ ನಿಮ್ಮ ಬಳಿಗೆ ಬರುತ್ತಿದ್ದವರ ಜೊತೆಯಲ್ಲಿ ಒಡಾಡಿ ನೋಡಿದ್ದೇನೆ. ನೀವು ಯಾವೊಂದು ಪಕ್ಷಪಾತವನ್ನೂ ತೋರಿಸದೆ ಕೋಮುವಾರು ಭಾವನೆ ಇಲ್ಲದೆ ಕೆಲಸ ಮಾಡಿದ್ದೀರೆಂದು ನಮ್ಮ ಅನುಭವದ ಮಾತು. ಆದ್ದರಿಂದ ಆಗ ತಾವು ಮಂತ್ರಿ ಸ್ಥಾನದಲ್ಲಿ ತಮ್ಮ ಕರ್ತವ್ಯವನ್ನು ಎಷ್ಟು ನಿಷ್ಪಕ್ಷಪಾತವಾಗಿ ನಿರ್ವಹಿಸಿದರೋ ಅಷ್ಟೇ ನಿಷ್ಪಕ್ಷಪಾತವಾಗಿ ಈ ಸಭೆಯ ಜವಾಬ್ದಾರಿಯನ್ನೂ ತಾವು ನಿರ್ವಹಿಸುತ್ತೀರೆಂಬ ನಂಬಿಕೆಯಿದೆ. ಇದು ನಾನು ಮಾತ್ರ ಹೇಳುವ ಮಾತಲ್ಲ. ಎದುರು ಪಕ್ಷದ ಶ್ರೀ ಗೋಪಾಲಗೌಡರೂ ಸಹ ಆ ರೀತಿ ತಾವು ನಿಷ್ಪಕ್ಷಪಾತವಾಗಿ ವರ್ತಿಸುತ್ತೀರಿ ಎಂಬ ಭರವಸೆ ಇದೆಯೆಂದು ಹೇಳಿದರು. ಅದು ಒಪ್ಪತಕ್ಕದ್ದೇ ಆಗಿದೆ.

ಇನ್ನು ತಾವು ಈ ಸಭೆಯ ಗೌರವ ಸ್ಥಾನಮಾನಗಳನ್ನು ಎತ್ತಿ ಹಿಡಿಯುವುದರಲ್ಲಿ ನಮಗೆ ಯಾವ ವಿಧವಾದ ಸಂದೇಹವೂ ಇಲ್ಲ. ಕಾರಣ ಇಷ್ಟೆ. ಅನೇಕ ವರ್ಷಗಳ ಕಾಲ ವಿವಿಧ ಕಾರ್ಯರಂಗಗಳಲ್ಲಿ ಕೆಲಸ ಮಾಡಿ ಅರಿತು ನುರಿತು ನಾನಾ ವಿಧವಾದ ಅನುಭವಗಳನ್ನು ಪಡೆದು ಈ ಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿರುವುದರಿಂದ, ತಾವು ನಮ್ಮ ಮಿತ್ರರು ಹೇಳಿದಂತೆ, ಈ ಸ್ಥಾನಕ್ಕೆ ಅರ್ಹರು. ಆದ್ದರಿಂದ ಈ ಸಭೆಯ ಸ್ಥಾನ ಮತ್ತು ಗೌರವಗಳನ್ನು ಕಾಪಾಡುವುದಕ್ಕೆ, ಈ ಸಭೆಯಲ್ಲಿರುವ ಎಲ್ಲಾ ವಿವಿಧ ಪಕ್ಷಗಳ ಪ್ರತಿನಿಧಿಗಳನ್ನು ಸಮಭಾವನೆಯಿಂದ ನೋಡುವುದಕ್ಕೆ ತಾವು ಅರ್ಹರಾಗಿದ್ದೀರಿ ಎಂಬ ಭರವಸೆ ಇದೆ ಎಂದು ನಾನು ಹೇಳುವವನಾಗಿದ್ದೇನೆ. ಇಷ್ಟು ಮಾತುಗಳನ್ನು ಹೇಳಿ ತಾವು ಈ ಸ್ಥಾನವನ್ನು ಅಲಂಕರಿಸಿರುವುದಕ್ಕೆ ಬಹಳ ಸಂತೋಷದಿಂದ ತಮ್ಮನ್ನು ಅಭಿನಂದಿಸುತ್ತೇನೆ.

ಕಡೆಯದಾಗಿ ಒಂದು ಮಾತನ್ನು ಹೇಳುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತೇನೆ. ಅದೇನೆಂದರೆ ಈಗ ಕೆಲವು ನಿಮಿಷಗಳ ಹಿಂದಿನವರೆಗೆ ಈ ಸಭೆಯ ಅಧ್ಯಕ್ಷ ಸ್ಥಾನವನ್ನಲಂಕರಿಸಿದ್ದ ನನ್ನ ಮಾನ್ಯ ಮಿತ್ರರಾದ ಶ್ರೀ ವಿ. ವೆಂಕಟಪ್ಪನವರ ವಿಚಾರ. ಅವರ ವಿಚಾರದಲ್ಲಿ ಏನಾದರೂ ಮಾತನಾಡಬೇಕೆಂದರೆ ನನಗೆ ಸ್ವಲ್ಪ ಗಂಟಲು ಬಿಗಿ ಹಿಡಿಯುತ್ತದೆ. ಕಾರಣ, ಅವರು ರಾಜಕೀಯ ರಂಗದಲ್ಲೇ ಅಲ್ಲ, ವಿದ್ಯಾರ್ಥಿ ದೆಶೆಯಿಂದಲೂ ಅವರ ಒಡನಾಡಿಯಾಗಿ ಸದಾ ಅವರೊಡನೆ ನಾನು ಕೆಲಸ ಮಾಡಿದ್ದೇನೆ. ಅವರ ಮನಸ್ಸು, ಅವರ ಸ್ವಭಾವ ನನಗೆ

ಚೆನ್ನಾಗಿ ಗೊತ್ತು. ಅವರು ಈ ಸಭೆಯ ಅಧ್ಯಕ್ಷಸ್ಥಾನಕ್ಕೆ ಚುನಾಯಿತರಾಗಿದ್ದರು. ಆ ಪೀಠವನ್ನು ಅಲಂಕರಿಸಿದಾಗ ಭಾಷಣ ಮಾಡಿರುವುದು ಇನ್ನೂ ನನಗೆ ಜ್ಞಾಪಕವಿದೆ. ಆ ದಿವಸ ಹೇಳಿರುವುದೂ ಈಗ ಹೇಳುವುದೂ ಏನೆಂದರೆ, ತಮ್ಮ ಜೀವಮಾನವನ್ನೆಲ್ಲಾ ದೇಶಸೇವೆಗಾಗಿಯೇ ವಿನಿಯೋಗಿಸಿ ದುಡಿಯುವುದಾಗಿ ಅವರು ವಿದ್ಯಾರ್ಥಿಯಾಗಿದ್ದಾಗ ಸಂಕಲ್ಪ ಮಾಡಿಕೊಂಡರು. ಅನೇಕ ವರ್ಷಗಳಿಂದಲೂ ನಾನು ಅವರ ಜೊತೆಯಲ್ಲೇ ಇದ್ದು ದೇಶಸೇವೆ ಮಾಡುತ್ತಾ ಅವರ ನಾಯಕತ್ವದಲ್ಲಿ ನಡೆದುಕೊಂಡು ಬಂದಿದ್ದೇನೆಂದು ಹೇಳಿದರೆ ಅದು ಸ್ವಪ್ರತಿಷ್ಠೆಯು ಮಾತ್ರಾಗಲಾರದು. ಅಂತೂ ನಾನು ನೋಡಿದಹಾಗೆ 1919—20ನೆಯ ಇಸವಿಯಿಂದ ಇದುವರೆಗೂ ದೇಶಸೇವೆಯನ್ನು ಅನೇಕ ಕಾರ್ಯಕ್ಷೇತ್ರಗಳಲ್ಲಿ ಯಶಸ್ವಿಯಾಗಿ ಸಾಮರ್ಥ್ಯದಿಂದ ಮಾಡಿ ಜನರ ಮೆಚ್ಚುಗೆ ಪಡೆದಿದ್ದಾರೆ. ಅವರು ಹಿಂದಿನ ಈ ಶಾಸನ ಸಭೆಯ ಅಧ್ಯಕ್ಷರಾಗಿ ಬಹಳ ದಕ್ಷತೆಯಿಂದ ಕೆಲಸಮಾಡಿದ್ದಾರೆ. ಈ ಸಭೆಯ ಸ್ಥಾನಮಾನ ಮತ್ತು ಸಭಾಸದಸ್ಯರ ಗೌರವಗಳನ್ನು ಬಹಳ ಎಚ್ಚರಿಕೆಯಿಂದ ಕಾಪಾಡಿಕೊಂಡು ಬಂದಿದ್ದಾರೆ. ಅನೇಕ ಸತ್ಸಂಪ್ರದಾಯಗಳನ್ನು ಈ ಸಭೆಯಲ್ಲಿ ಪ್ರಾರಂಭಿಸಿದ್ದಾರೆ. ಅವರು ಈ ದಿನ ಆ ಸ್ಥಾನವನ್ನು ತ್ಯಾಗಮಾಡಿದ್ದಾರೆ. ಆದ್ದರಿಂದ ಇಷ್ಟು ಸೇವೆ ಸಲ್ಲಿಸಿ ಈ ಸಭೆಯ ಗೌರವವನ್ನು ಹೆಚ್ಚಿಸಿ ಸೇವೆ ಸಲ್ಲಿಸಿರುವುದಕ್ಕಾಗಿ ಅವರನ್ನು ನಾನು ಕೃತಜ್ಞತಾಪೂರ್ವಕವಾಗಿ ವಂದಿಸಬೇಕಾಗಿದೆ. ಇಷ್ಟು ಮಾತನ್ನು ಹೇಳಿ ಅವರಿಗೂ, ನೂತನ ಅಧ್ಯಕ್ಷರಿಗೂ ಭಗವಂತನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸಿ ಈ ಸಭೆಯ ಕೆಲಸಕಾರ್ಯಗಳನ್ನು ದಕ್ಷತೆಯಿಂದ ಮತ್ತು ನಿಷ್ಪಕ್ಷಪಾತವಾಗಿ ನಡೆಸುವುದಕ್ಕೆ ಹೊಸ ಅಧ್ಯಕ್ಷರಿಗೆ ಅವಕಾಶವುಂಟಾಗಲೆಂದು ಹಾರೈಸುತ್ತೇನೆ.

**Janab J. MOHAMED IMAM** (Jagalur.)—Mr. Speaker, Sir, I associate myself with the Leader of the House and my other friends in paying my tribute to the retiring Speaker Sri V. Venkatappa. He has been guiding the destinies and affairs of this House for the last 2 years and I must say that, on the whole, he has done well. When he was elected, there were some misgivings as to the treatment the Opposition members would get on account of his party affiliation. But I must take this opportunity to say that he has treated the members of the Opposition particularly very well. He gave them full scope and in the end he created a certain amount of confidence in us. On the whole, we are sorry that he is relinquishing his office. On behalf of my friends here I pray that he may serve the country in a better and nobler capacity.

Sir, you have been my friend for a very long time. Both of us have worked together in politics and in Legislatures for nearly quarter of a century.

We have been colleagues on various committees and councils. I congratulate you personally as a friend. I know you are suited and fitted to hold this office not only by your past experience but also by your service. The office of the Speaker is a very responsible one. It is so responsible that certain well known traditions which are in every democratic institution, have to be observed, because on him depends the destiny and the political life of every member of this House. So the first tradition to be observed is that the Speaker's choice should be such that it will be acceptable to all the parties and to all the members of this House. In Western democracies you generally find that a Speaker's place is never contested and it is a matter left to the entire House. The Hon'ble Leader of the House was pleased to state just now that the Congress Party did well in selecting you as their nominee. I would have been more glad if you had been the nominee of the entire House; and the Leader of the House would have done very well, so far as the particular choice was concerned, if he had consulted all the members of this House so that we could have set up a healthy convention and healthy tradition for the future members who come in our places. Because, it is quite imperative that every member of this House feels a satisfaction that he will have justice and fairplay from the Chair. I am saying this not because I am doubting you; but, I am making a general statement. The office of Speaker is never a subject of party politics nor of party propaganda. I remember that when the late Vithalbhai Patel was elected as the President of the Legislative Assembly then existing, though he was affiliated to a certain party he at once made an open statement in the House: "From now I belong to everybody. I belong to no party and no religion." That was the statement made by him. You know how ably he conducted the affairs. Many of the traditions which he set up, many of the rulings he gave, are still in vogue. As you all know, he was the first non-official President of the Assembly and he is still remembered in the history of

(JANAB MOHAMED IMAM.)

democracy. I hope that you will make an announcement—that is my suggestion—that being the head of this House and having the destinies of the members of this House in your hands, you will not have any party affiliation and that you will look after the interests of every member of this House. Sri Venkatappa did it to a very large extent and we have absolutely no reason to complain anything against him. But times are such that if there is party affiliation and human nature being what it is, if there is going to be any party loyalty, whether voluntarily or involuntarily, a situation may arise when one may not be in a position to do his duties justly and fairly.

Mr. SPEAKER.—Wait and see.

Janab J. MOHAMED IMAM.—I may make it clear that there is nothing personal. I am simply stating facts. For example, I may state that in some democracies the Speaker belongs to one party and the Deputy Speaker belongs to another party. By mutual understanding they function. I think the Speaker is never changed until he himself retires voluntarily. We are still in the infant stage of democracy and it is our duty to build up traditions for the sake of posterity, and we look to you for that.

Another misgiving was expressed by my friend Sri Gopala Gowda. I do not know if this tradition is existing anywhere else. So far as I know there is no such thing. You were in office for the last four years and a half as Minister. You know that in this House many of your acts of omission and commission will be subject matter of debate in which you yourself will personally feel involved. It is a very difficult situation and I know that on some occasions it will be very difficult for you to discharge your duties. I do not know if there is any instance of an ex-Minister immediately after relinquishing the office becoming a Speaker. Anyhow a tradition has been set up, for good or bad.

Sri K. PUTTASWAMY (Srirangapatna).—Sri H. B. Gundappa Gowda.

Janab J. MOHAMED IMAM.—Those were not democratic days. And he did not owe allegiance to any party. Anyhow this is a new situation under democratic set-up. It is a mistake. I am speaking generally and placing facts before you. I do not say that the office of Speaker is a bed of roses. You have to encounter many difficulties, and many problems concerning yourself and the administration will arise. All this, I am sure, you will overcome. When such an occasion arises you are the best judge as to what to do and how to do. I am not going to make any suggestion.

So far as the Legislative Assembly is concerned it is our duty to build up healthy and proper traditions not only for ourselves but also for the future. Personally speaking, I am glad that you have been elected as the Speaker. I have declared any number of times that almost all the members of the opposition are sportsmen. They will call a spade 'a spade'. If Government have really done well we do not hesitate to give our appreciation and the necessary congratulation. If they have gone wrong we do not shirk to point out their mistakes and their commissions. I beg to tell the Hon'ble Leader of the House that there may be occasions to criticise. But these criticisms must be taken in a sportsmanly manner. Outside this House we are all good friends. The Hon'ble Leader of the House has been a good friend of us. I know Sri Siddalingiah also very well. He always calls me in familiar terms. With regard to Sri A. G. Ramachandra Rao, perhaps many of you do not know bis pet name; he is called "ಅತ್ರ". I know Sri Channiah sufficiently long. He is a gentleman. I need not say anything about Sri Siddaveerappa. He comes from my own district. We are one and we are interested in efficient administration. We are never after office. You may enjoy as long as you want. But we are anxious that under your regime the country should be benefited, that the people should be benefited and and that the status of the State must improve. It is only with that object we are making observations. When

we criticise the Government, let it not be understood that we are doing that for the sake of criticising. If there is proper ground we frankly and fearlessly bring matters to the notice of the Government.

So, Sir, again I take this opportunity to congratulate you. I have every hope and confidence that you will emerge successful in spite of all these difficulties and I am sure that you will build up glorious traditions for the future. I wish you every success. Thank you.

*ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಅಧ್ಯಕ್ಷರೇ, ಇಂದು ಹಿಂದಿದ್ದ ಅಧ್ಯಕ್ಷರು ನೂತನ ಅಧ್ಯಕ್ಷರನ್ನು ಚುನಾಯಿಸಿ ತಾವು ಆ ಸ್ಥಾನದಿಂದ ಸಂತೋಷದಿಂದ ಹೋದ ದಿವಸ. ಹಿಂದಿದ್ದ ಅಧ್ಯಕ್ಷರು ನಾವು ಪ್ರಜಾಪ್ರತಿನಿಧಿಸಭೆಯಲ್ಲಿದ್ದ ಕಾಲದಲ್ಲಿ ಅವರು ಅದಕ್ಕೆ ಅಧ್ಯಕ್ಷರಾಗಿದ್ದರು. ನಮ್ಮ ದುರದೃಷ್ಟದಿಂದ ನಮ್ಮನ್ನು ವಜಾಮಾಡಿ ಕಳುಹಿಸಿಬಿಟ್ಟರು.

ಒಬ್ಬ ಸದಸ್ಯರು.—ಡಿಸ್‌ಮಿಸ್ ಮಾಡಿದರು.

ಶ್ರೀ ಎಂ. ಶಂಕರಲಿಂಗೇಗೌಡರು.—ಇನ್ನೇನು ಡಿಸ್‌ಮಿಸ್ ಮಾಡಿದಂತೆಯೇ! ಅಂತೂ ಹೀಗಾಗಿ ಈ ಎರಡು ವರ್ಷಗಳು ಅವರ ದರ್ಶನ ಲಾಭ ನಮಗಿರಲಿಲ್ಲ. ಈಗ ಹಾಗೂ ಹೀಗೂ ಕಡೇ ದಿವಸ ಅವರ ದರ್ಶನವಾಯಿತು. ಅದೂ ಎಂಥ ದಿವಸ! ಅವರು ಅಧ್ಯಕ್ಷ ಪದವಿಯನ್ನು ಬಿಟ್ಟು ಹೋಗುವ ಕಾಲ, ಹೊಸ ಅಧ್ಯಕ್ಷರು ಬರುವ ಕಾಲ—ಹೀಗೆ ಎರಡೂ ಸೇರಿದ ಕಾಲ. ಈ ಸಂಧಿಕಾಲ ಹೇಗೆ ಸೇರಿದೆಯೆಂದರೆ, ರಾಮನಿಗೂ ಮಡಿವಾಳನಿಗೂ ವಾಗ್ವಾದವಾಯಿತಲ್ಲಾ ಆ ಸಮಯ ಸೇರಿದ ಹಾಗೆ. ಆ ವಾಗ್ವಾದವೆಲ್ಲಾ ಗೊತ್ತೇ ಇದೆ; ನಾನು ಬೇರೆ ಹೇಳಬೇಕಾಗಿಲ್ಲ.

ಮುಖ್ಯವಾಗಿ ಅವರು (ಶ್ರೀ ಗೋಪಾಲಗೌಡರು) ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆಗೆ ನಿಲ್ಲುವ ಕಾಲದಲ್ಲಿ ಕಾಂಗ್ರೆಸ್ಸಿಗೆ ವಿರೋಧಪಕ್ಷವೆಂಬುದು ನಮ್ಮ ದೇಶದಲ್ಲಿದೆಯೇ ಎಂಬುದನ್ನು ಯೋಚನೆಯೇ ಮಾಡಲಿಲ್ಲವೆಂದು ಕಾಣುತ್ತದೆ. ಕಾಂಗ್ರೆಸ್ಸಿನವರು ತಮ್ಮ ಉಮೇದುವಾರನನ್ನು ನಿಲ್ಲಿಸಿದಮೇಲೆ ಆಯಿತು. ಅವರಿಗೆ ವಿರೋಧಪಕ್ಷವೆಂಬುದೆಲ್ಲಿದೆ? ಎಲ್ಲಿಯೋ ಕೆ. ಎಂ. ಪಿ. ಪಾರ್ಟಿಯವರು ಕೆಲವರಿದ್ದಾರೆ; ಸೋಷಿಯಲಿಸ್ಟ್ ಪಾರ್ಟಿಯವರು ಕೆಲವರಿದ್ದಾರೆ; ಅಂಬೇಡ್ಕರ್ ಪಾರ್ಟಿಯಿಂದ ಒಬ್ಬೊಬ್ಬರು; ಕೊನೆಗೆ ಕಮ್ಯೂನಿಸ್ಟ್ ಪಾರ್ಟಿಯಿಂದ ಒಬ್ಬರು ಮಾತ್ರ ಈ ಸಭೆಗೆ ಚುನಾಯಿತರಾಗಿ ಬಂದಿದ್ದಾರೆ. ಆದ್ದರಿಂದ ನಮ್ಮ ಪಾರ್ಟಿಯವರು (ಕಾಂಗ್ರೆಸೇತರ) ನಿಲ್ಲುತ್ತೇವೆಂದು ಹೇಳಿದ ಮೇಲೆ, ಅವರು 75 ಜನರಿರುವ ಕಾಲದಲ್ಲಿ ಮತ್ತು ಅವರೇ ಚುನಾಯಿಸುವ ಕಾಲದಲ್ಲಿ, ಯಾವ ಪಾರ್ಟಿಗೂ ಸೇರದೆ ಇರುವವರು ಆ ಸ್ಪೀಕರ್ ಸ್ಥಾನದಲ್ಲಿರಬೇಕೆಂದು ನೀವು ಬೋಧಿಸುತ್ತಿರುವಾಗ, ಆ ಸ್ಥಾನಕ್ಕೆ ನಾವು ಸ್ಪರ್ಧೆಗೆ ನಿಲ್ಲಬೇಕೇ ಬೇಡವೇ ಎಂಬುದನ್ನು ಕಾಂಗ್ರೆಸ್ಸೇತರ ಪಾರ್ಟಿಗಳೆಲ್ಲರೂ ಸೇರಿಕೊಂಡು ಮಾತನಾಡಿ ನಂತರ ನಿಂತಿದ್ದರೆ ಚೆನ್ನಾಗಿತ್ತು. ಹಾಗಿಲ್ಲದೆ ಸುಮ್ಮನೆ ನಿಂತುಬಿಟ್ಟು, 'ಸೋತರೂ ಸೋತೆ, ನನಗೆ ಸಂತೋಷವೇ ಆಯಿತು' ಎಂದು ಹೇಳಿದ್ದರ ಅರ್ಥವೇನೋ ನನಗೆ ಗೊತ್ತಾಗುವುದಿಲ್ಲ. ಅದಕ್ಕೆ ಬದಲು ನಿಲ್ಲುವಾಗಲೇ ಬುದ್ಧಿವಂತಿಕೆಯಿಂದಿದ್ದರೆ ಎಷ್ಟೋ ಚೆನ್ನಾಗಿತ್ತು. ನಾವೂ ಸಪೋರ್ಟ್ ಮಾಡಿದೆವು ಎಂತಲೇ ಹೇಳಬಹುದಾಗಿತ್ತು. ನಮ್ಮ ದೇಶದಲ್ಲಿ 25 ಜನ ಕಾಂಗ್ರೆಸ್ಸೇತರರಿರುವಲ್ಲಿ 14 ಜನರು ವಿರೋಧಪಕ್ಷ, ವಿರೋಧಪಕ್ಷ ಎಂದು ಮಾಡಿಕೊಂಡರೆ ಏನಾಯಿತು..............

ಒಬ್ಬ ಸದಸ್ಯರು.—ಮಧ್ಯಪಕ್ಷದವರು ಬೇರೆ ಇದ್ದಾರಲ್ಲಾ!

ಶ್ರೀ ಎಂ. ಶಂಕರಲಿಂಗೇಗೌಡರು.—ಹೌದು, ಮಧ್ಯಪಕ್ಷ ಬೇರೆ ಇವೆ. ಕೆಲವು ವೇಳೆ ಇಬ್ಬರೂ ಬಗ್ಗದೇ ಇರುತ್ತಾರೆಂದೇ ನಾವು ಸ್ವತಂತ್ರರಾಗಿರುವುದು. ನಮ್ಮ ಮಿತ್ರರಾದ ಜನಾಬ್ ಇಮಾಂರವರು ಹೇಳಿದರು, ಹೀಗೆ ಪಾರ್ಲಿಮೆಂಟರಿ ನಡೆವಳಿಕೆಯನ್ನು ನಡೆಸುವುದಕ್ಕಾಗಿ ಅಧ್ಯಕ್ಷರನ್ನು ಚುನಾವಣೆ ಮಾಡುವ ಕಾಲದಲ್ಲಿ ಸಭೆಯ ನಾಯಕರಾಗಿರುವವರು, ಕಾಂಗ್ರೆಸ್ ಪಾರ್ಟಿಯ ನಾಯಕರಾಗಿರುವವರು ಎಲ್ಲ ಪಾರ್ಟಿಯವರನ್ನೂ ಸೇರಿಸಿಕೊಂಡು 'ನಾವೆಲ್ಲಾ ಈ ರೀತಿ ಒಬ್ಬರನ್ನು ಚುನಾವಣೆ ಮಾಡಬೇಕು ಎಂದು' ಹೇಳಿ ಅವರ ಸಲಹೆಯನ್ನೂ ಕೇಳಬೇಕಾಗಿತ್ತು ಎಂದು. ಆದರೆ ಅವರಿಗೇನು ಹಂಗು, ತಮ್ಮಲ್ಲೇ 75 ಜನರ ಬಹುಮತವಿರುವಾಗ! ನೀವುಗಳು, 'ನಾವೇ ಅವರ ಹತ್ತಿರ ಹೋಗಿ ನಿಮಗೇ ಓಟು ಕೊಡುತ್ತೇವೆಂದರೆ ಅವಮಾನ' ಎಂದು ಕೂತುಕೊಂಡಿರಿ. ತನ್ಮಧ್ಯೆ ಒಬ್ಬರನ್ನು ಚುನಾವಣೆಗೆ ನಿಲ್ಲಿಸಿ, ಸೋತರೂ ಸಂತೋಷವೇ ಎಂದರೆ ಅರ್ಥವೇನು!!

ಆಮೇಲೆ ಈಗ ನಿವೃತ್ತರಾದ ಶ್ರೀ ವೆಂಕಟಪ್ಪನವರ ವಿಚಾರದಲ್ಲಿ ಒಂದು ಮಾತು ಹೇಳುವುದಾದರೆ, 'ಅವರೊಂದು ರತ್ನ' ಎನ್ನಬೇಕು. ನಮ್ಮ ಜಾತಿಯಾದ ಒಕ್ಕಲಿಗರಿಗೆ ಮಾತ್ರ ರತ್ನವಲ್ಲ; ಇಡೀ ಕಾಂಗ್ರೆಸ್ ಜಾತಿಗೇ ರತ್ನವೆಂದು ಹೇಳಿದರೂ ಅತಿಶಯೋಕ್ತಿಯಲ್ಲ. ಹಿಂದಿನ ಪ್ರಜಾಪ್ರತಿನಿಧಿ ಸಭೆಯನ್ನು ಬಹಳ ಚೆನ್ನಾಗಿ ನಡೆಸಿದರು. ಎರಡು ವರ್ಷ ಅಲ್ಲಿಂದೀಚೆಗೆ ಹೇಗೆ ನಡೆಸಿದರೋ ಗೊತ್ತಿಲ್ಲ. ಅದು ನನಗಷ್ಟು ತಿಳಿಯದು. ಅದನ್ನೂ ಬಹಳ ದಕ್ಷತೆಯಿಂದ ನಡೆಸಿದರೆಂದು ನಾನು ಕೇಳಬಲ್ಲೆ.

ಆಮೇಲೆ, ಈಗ ಹೊಸದಾಗಿ ಅಧ್ಯಕ್ಷರಾಗಿ ಬಂದಿರುವ ಶ್ರೀಮಾನ್ ಸಿದ್ದಯ್ಯನವರ ವಿಚಾರ ನೋಡುವುದಾದರೆ ................

ಶ್ರೀ ಎನ್. ಸಿ. ನಾಗಯ್ಯರೆಡ್ಡಿಯವರು (ಗೌರಿಬಿದನೂರು).—ಅವರು ಒಕ್ಕಲಿಗರಲ್ಲ!

ಶ್ರೀ ಎಂ. ಶಂಕರಲಿಂಗೇಗೌಡರು.—ಅವರು ಒಕ್ಕಲಿನವರೇ. ಲಿಂಗ ಕಟ್ಟಿಕೊಂಡ ಮಾತ್ರಕ್ಕೇ ಅವರೂ ಒಕ್ಕಲಿಗರೇ ಅಲ್ಲವೇ!

ಹಿಂದೆ 1935ನೆಯ ಇಸವಿಯಲ್ಲಿ ಕಾಂಗ್ರೆಸ್ಸಿನಲ್ಲಿದ್ದಾಗ ಜವಾಬ್ದಾರಿ ಸರ್ಕಾರ ಬೇಕೆಂದು ಒಂದು ಭಾಷಣಮಾಡಿ, ಜೈಲಿಗೆ ಹೋಗಲು ಶುರು ಮಾಡಿದವರಲ್ಲಿ ಅವರೇ ಮೊದಲನವರು. ಜೈಲಿನಿಂದ ಬಂದ ಮೇಲೆ, ಜೈಲಿನಲ್ಲಿ ಅವರು ಪಟ್ಟ ರತಕ್ಕ ಯಾವ ಹಿಂಸೆಯನ್ನು ನಾನೇ ಕೇಳಿದ್ದೇನೆ. ಆ ತಕ್ಷಣ ನಾನೇ ಆಗಿನ ದಿವಾನರ ಹತ್ತಿರ ಹೋಗಿ, 'ಹೀಗೆಲ್ಲಾ ಹಿಂಸೆ ಮಾಡಿದರೆ ನಾನೂ ಕೂತ ನಿಮ್ಮೊಡನಿರುವುದಿಲ್ಲ, ನಾನು ಹೊರಟು ಹೋಗುತ್ತೇನೆ' ಎಂದು ಹೇಳಿದ್ದೆ. ಅಷ್ಟಾದರೂ ಡೆಪ್ಯುಟಿ ಕಮಿಷನರುಗಳು ನನ್ನನ್ನು ಬಿಡುತ್ತಿರಲಿಲ್ಲ. ಅವರ ಜೊತೆಗೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಆಗ ಇಂಗ್ಲೀಷರು ಹೀಗೆ ಹೇಳದೆ ಕೇಳದೆ ನಮ್ಮ ದೇಶವನ್ನು ಬಿಟ್ಟು ಹೊರಟುಹೋಗುತ್ತಾರೆಂಬುದೂ ನನಗೆ ಗೊತ್ತಿರಲಿಲ್ಲ. ಅದೇನಾದರೂ

(ಶ್ರೀ ಎಂ. ಶಂಕರಲಿಂಗೇಗೌಡರು).

ಗೊತ್ತಾಗಿದ್ದರೆ ನಾನು ಕಾಂಗ್ರೆಸ್ ಪಾರ್ಟಿ ಲೀಡರ್‌ಷಿಪ್‌ನ್ನು ಕೂಡ ಇವರ್‍ಯಾರಿಗೂ ಸಿಗಗೊಡುತ್ತಿರಲಿಲ್ಲ. ಅಂಥಾದ್ದರಲ್ಲಿ ಏನೂ ಮುಂದಿನ ಆಶೆಗಳಿಲ್ಲದೆ ಇವರು ಸೇವೆ ಸಲ್ಲಿಸಿದ್ದಾರೆ. ಜೈಲಿನಲ್ಲಿರುವಾಗಲೂ ಕೂಡ, ಜೈಲಿನಲ್ಲಿರುವವರಿಗೆ plaints ಬರೆದುಕೊಟ್ಟು ಎಷ್ಟೋ ಖೂನಿ ಕೇಸಿನಲ್ಲಿ ಸಿಕ್ಕಿಕೊಂಡವರನ್ನು ಬಿಡುಗಡೆ ಮಾಡಿಸಿದ್ದಾರೆ. ಜೈಲಿನಲ್ಲಿ ರಾಗಿ ಬೀಸಿದ್ದಾರೆ. ಝಾಡಮಾಲಿ ಕೆಲಸವನ್ನು ಮಾಡಿದ್ದಾರೆ. ಅವರಾದ ಮೇಲೆ ಕಾಂಗ್ರೆಸ್ಸಿನವರು ಜವಾಬ್ದಾರಿ ಸರ್ಕಾರಕ್ಕಾಗಿ ಜೈಲಿಗೆ ಹೋಗಬೇಕೆಂದು ಸಾರಲು ಶ್ರೀಮಾನ್ ಹನುಮಂತಯ್ಯನವರು ಹುಟ್ಟಿಕೊಂಡರು. ಒಂದು ಭಾಷಣ, ಎರಡು ಭಾಷಣ ಮಾಡಿದರೋ ಇಲ್ಲವೋ ಮೊದಲಿಯಾರ್ ಅವರಂತೂ ನಡುಗಿಹೋದರು. ಜವಾಬ್ದಾರಿ ಸರ್ಕಾರವನ್ನು ತಂದೇ ತರಬೇಕೆಂದು ಇವರೆಲ್ಲರೂ ಬೇಕಾದಷ್ಟು ಹೊಡೆದಾಡಿದರು. ಇದನ್ನು ನೋಡಿಕೊಂಡು ಬೇರೆಯವರೂ ಕೆಲವರು, ಇವರಂತೂ ಹೊರಟು ಹೋಗುತ್ತಾರೆಂದು, ಟೋಪಿ ಹಾಕುವುದಕ್ಕೆ ಶುರು ಮಾಡಿದರು............

**Sri B. NARAYANASWAMY** (Mysore City-South).—On a point of order, Sir. What is it that the Hon'ble Member is speaking about ?

**Mr. SPEAKER.**—He is narrating past history which is not necessary.

**Sri M. SHANKARALINGE GOWDA.**—What is the point of order there Sir!

**Mr. SPEAKER.**—Shall we fix some time limit for the Hon'ble Members' speeches ?

**Sri M. SHANKARALINGE GOWDA.**—I have no objection to stop my speech. What is the good of raising a point of order ?

**Sri M. PALANIYAPPAN** (Ulsoor).—Mr. Speaker, what is the subject matter before the House ?

**Sri M. SHANKARALINGE GOWDA.**—This is "ಅಭಿನಂದನಾ" speech. (Laughter!) If the Hon'ble Member cannot understand it, what can I do; (Laughter) ?

**Mr SPEAKER.**—The Hon'ble Member feels that there is some relevancy in what he is saying.

**Sri M. SHANKARALINGE GOWDA.**—Yes, Sir, there is.

ಹೀಗೆ ಅವರು ಜವಾಬ್ದಾರಿ ಸರ್ಕಾರವನ್ನು ಗಳಿಸಿ, ಅದನ್ನು ನಾವು ನಡೆಸುವುದಕ್ಕೆ ಶಕ್ತಿ ಇದೆಯೋ ಇಲ್ಲವೋ ಎಂಬುದರಲ್ಲೂ ಕೂಡ ಶಕ್ತಿಯಿದೆಯೆಂಬುದನ್ನು ತೋರ್ಪಡಿಸಿದ್ದಾರೆ. ಇವರೂ ಇನ್ನೆಷ್ಟು ವರ್ಷ ಆಳುತ್ತಾರೆ! ಇನ್ನು ಐದು ವರ್ಷ ಆಳಬಹುದು. ಹಾಗೆಯೇ ನಿಮಗೂ ಶಕ್ತಿ ಬಂದರೆ ನೀವೂ ಆಳಬಹುದು. ಇವರು ಇಂಗ್ಲೀಷರನ್ನು ಓಡಿಸಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪನೆ ಮಾಡಿ ನಾವೂ ಆಡಳಿತ ನಡೆಸಬಲ್ಲೆವು ಎನ್ನುವುದನ್ನು ತೋರಿಸಿದ್ದಾರೆ. ಇಂಥ ಜವಾಬ್ದಾರಿ ಸರ್ಕಾರದಲ್ಲಿ ಮಂತ್ರಿತ್ವವನ್ನು ನಡೆಸಿ, ಅಲ್ಲಿ ಅನೇಕ ವಿಚಾರಗಳಲ್ಲಿ ಅನುಭವಪಡೆದುಕೊಂಡು ಈಗ ಈ ಸ್ಥಾನವನ್ನಲಂಕರಿಸಿದ್ದಾರೆ. ಈ ಸಭೆಯ ಅಧ್ಯಕ್ಷ ಪದವಿಯೆಂದರೆ ಅದೊಂದು Judicial Head. ಏನಾದರೊಂದು ಕಾರ್ಯಲೋಪ (point of order) ಬಂದಿತೆಂದರೆ ಅದರ ಬಗ್ಗೆ ತೀರ್ಮಾನ ಹೇಳಬೇಕಾದರೆ ಬಹಳ ಯೋಚನೆ ಮಾಡಿ ಹೇಳಬೇಕು. ಚೆನ್ನಾಗಿ ಓದಿರಬೇಕು; ಲಾಯರ್ ತನದ ಅನುಭವವಿರಬೇಕು. ಅಂಥ ಅರ್ಹತೆಗಳಿದ್ದರೇ ಒಳ್ಳೆಯದು. ಇಲ್ಲದಿದ್ದರೆ ಸೆಕ್ರೆಟರಿಗಳವರೇ ಎಲ್ಲವನ್ನೂ ಬರೆದುಕೊಡಬೇಕಾಗುತ್ತದೆ. ಈಗ ಇವರಲ್ಲಿ ವಿದ್ಯೆಯಿದೆ; ಕಾನೂನಿನ ಪರಿಶ್ರಮವಿದೆ. ಎಲ್ಲಾ ವಿಷಯಗಳನ್ನೂ ತಿಳಿದಿರುವವರಾಗಿದ್ದಾರೆ. ಆದ್ದರಿಂದ ದಿವ್ಯವಾದ ತೀರ್ಮಾನಗಳನ್ನು ಕೊಡುತ್ತಾರೆಂಬುದರಲ್ಲಿ ಅನುಮಾನವಿಲ್ಲ.

ಇನ್ನೊಂದು ವಿಚಾರವನ್ನು ಮಾನ್ಯ ಸದಸ್ಯರು ಕೆಲವರು ಹೇಳಿದರು. ಕಾಂಗ್ರೆಸ್ ಪಾರ್ಟಿಯೇ ದರ್ಬಾರಿನಲ್ಲಿರುವಾಗ ಸ್ಪೀಕರ್ ಸ್ಥಾನದಲ್ಲಿ ಕಾಂಗ್ರೆಸ್ ಪಾರ್ಟಿಯವರೇ ಒಬ್ಬರು ಇರಕೂಡದು ಎಂದು ವಾದಿಸಿದರು. ಆ ರೀತಿ ನಿಯಮ ಎಲ್ಲಿದೆ ? ಈಗಂತೂ ಕಾಂಗ್ರೆಸ್ ಪಾರ್ಟಿಯವರು ತಮಗೆ ಸ್ಪೀಕರ್ ಇಂಥವರೇ ಇರಬೇಕೆಂದು ತೀರ್ಮಾನಮಾಡಿ ಚುನಾಯಿಸಿದರು. ನೀವೂ ವಿರೋಧ ಪಕ್ಷದವರು ಸೇರಿ ಇಂಥವರೇ ಒಬ್ಬರು ಇರಬೇಕೆಂದು ಹೇಳಿ ಅವರಿಗೆ ಓಟು ಕೊಡಬೇಕೆಂದು ಕೇಳಿಕೊಂಡಿದ್ದರೆ ಅವರಿಗೆ ಓಟು ಕೊಡುತ್ತಿದ್ದರು. ಇದೆಲ್ಲಾ ಅವರು ಸ್ಪರ್ಧೆಗೆ ನಿಲ್ಲುವಾಗಲೇ ಉಪಯೋಗಿಸಬೇಕಾದ ಬುದ್ಧಿವಂತಿಕೆಯಾಗಿತ್ತು. ನಿಂತ ಮೇಲೆ ಕೆಲಸ ಕೆಟ್ಟು ಹೋಯಿತು. ಈಗ ತತ್ವ ದೃಷ್ಟಿಯಿಂದ ಮಾತನಾಡುವುದಾದರೆ, ಈ ಸ್ಪೀಕರ್‌ರವರಿಗೆ 79 ಓಟು ಬಂದಿದೆ. ಕಾಂಗ್ರೆಸ್ಸಿನವರದೇ 79 ಓಟೂ ಅಲ್ಲ. ಕಾಂಗ್ರೆಸೇತರರೂ 7 ಓಟು ಕೊಟ್ಟಿದ್ದಾರೆ ಆದ್ದರಿಂದ ಎಲ್ಲರೂ ಒಂದಾಗಿ ಸೇರಿ ಅಧ್ಯಕ್ಷಸ್ಥಾನವನ್ನು ಕಾಂಗ್ರೆಸ್ಸಿನವರಿಗೇ ಕೊಟ್ಟಿದ್ದರೆ ಎಷ್ಟೋ ಚೆನ್ನಾಗಿತ್ತು. ಹಿಂದಿದ್ದ ಸ್ಪೀಕರ್‌ರವರು ತಾವು ಯಾರಿಗೂ ಓಟು ಕೊಡುವುದಿಲ್ಲವೆಂದು ಹೇಳಲಿಲ್ಲವೇ ? ಹಾಗೆಯೇ ಇವರೂ ಕೂಡ ಕಾಂಗ್ರೆಸ್ಸಿನವರೇ ಆಗಲಿ, ಕಾಂಗ್ರೆಸೇತರರೇ ಆಗಲಿ ಎಲ್ಲರಿಗೂ ಸಮಾನಾವಕಾಶ ಕೊಡುತ್ತಾರೆಂದು ನಾನು ಬಲ್ಲೆ. ಈ ಸಭೆಗೆ ಸಿದ್ದಯ್ಯನವರು ಒಂದು ರತ್ನವೆಂದು ನಾನು ಹೇಳುತ್ತೇನೆ.

ಹರಿವ ತೊರೆಗಳ ವನ ತಟಾಕದ
ಮರಕುಸುಮ ಮಲ್ಲಿಗೆಯ ಬನಗಳ
ಗ್ರಾಮ ಪ್ರಾಂತಗಳೊಳೆಸೆವ ಹಿರಿಯರ ತೋಪುಗಳ ಕೊಳಗಳನು.
ಗುರುತರದ ಮಂಟಪಗಳಿಂದ ಮೆರೆವ
ಮಹಿಷೂರ ರಾಜ್ಯದೊಳ್ ವಾಸಿಸುವ ಮಕ್ಕಳುಗಳಲ್ಲಿ
ಅಧ್ಯಕ್ಷ ಸಿದ್ದಯ್ಯನವರೇ ಪುಣ್ಯಶಾಲಿಗಳೆಂದು ಕೈಮುಗಿದು ಕೂಡುವೆನು.

**ಶ್ರೀ ಮುಲ್ಕ ಗೋವಿಂದರೆಡ್ಡಿಯವರು** (ಚಿತ್ರದುರ್ಗ).—ಅಧ್ಯಕ್ಷರೇ, ತಮ್ಮನ್ನು ಅಭಿನಂದಿಸುವುದರಲ್ಲಿ ನಾನು ಈ ಸಭೆಯ ನಾಯಕರು ಹೇಳಿದ ಅಭಿಪ್ರಾಯಗಳನ್ನೇ ಇನ್ನೊಂದಾವರ್ತಿ ಒತ್ತಿ ಹೇಳಿ ತಮ್ಮನ್ನು ಅಭಿನಂದಿಸುತ್ತೇನೆ. ನಮ್ಮ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಬಂದ ಮೇಲೆ, ತಾವು ಮಂತ್ರಿಗಳಾದ ಮೇಲೆ ಹಿಂದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ನಾವು ಕೆಲವರು ಸದಸ್ಯರಾಗಿದ್ದೆವು. ಆಗ ತಾವು ಸ್ಪೀಕರ್ ಆಗಿಲ್ಲದಿದ್ದರೂ ದಿವಾನ್ ಅಧ್ಯಕ್ಷರು ಇಲ್ಲದಿದ್ದಾಗ ಸ್ವಲ್ಪ ದಿವಸ ತಾವು ಮಂತ್ರಿಗಳಾಗಿದ್ದು ಆ ಅಧ್ಯಕ್ಷ ಪೀಠವನ್ನಲಂಕರಿಸುತ್ತಿದ್ದಿರಿ. ಆ ಕಾಲದಲ್ಲಿ ನಿರ್ವಂಚನೆಯಿಂದಲೂ

ನಿಷ್ಪಕ್ಷಪಾತದಿಂದಲೂ ಆ ಸಭೆಯ ಗೌರವ, ಘನತೆ ಮತ್ತು ವ್ಯಕ್ತಿತ್ವವನ್ನು ಕಾಪಾಡಿದ್ದೀರಿ. ಶ್ರೀಮಾನ್ ಹನುಮಂತಯ್ಯನವರು ಹೇಳಿದ ಹಾಗೆ ತಾವು ವಿರೋಧ ಪಕ್ಷದವರನ್ನು ನಿಷ್ಪಕ್ಷಪಾತವಾಗಿ ನೋಡಿದ್ದೀರಿ. ಎಷ್ಟೋ ಜನ ಕಾಂಗ್ರೆಸ್ಸಿನವರು ಬಂದು ತಾವು ವಿರೋಧ ಪಕ್ಷದವರಿಗೇ ಹೆಚ್ಚಿನ ಉತ್ತೇಜನ ಕೊಡುತ್ತಿದ್ದೀರಿ ಎಂದು ಹೇಳಿದರೂ ಅದನ್ನು ಲೆಕ್ಕಿಸದೆ, ನಾನು ದೇಶದ ಮಂತ್ರಿ, ದೇಶದ ಹಿತವನ್ನು ಕಾಪಾಡಬೇಕು, ಕಾಂಗ್ರೆಸ್ ಸದಸ್ಯರ ಹಿತವನ್ನು ಮಾತ್ರ ಕಾಪಾಡುವುದಕ್ಕೆ ನಾನಿಲ್ಲ ಎಂದು ಹೇಳಿ, ನಿಷ್ಪಕ್ಷಪಾತ ಸೇವೆ ಸಲ್ಲಿಸಿದ್ದೀರಿ. ಈಗ ತಾವು ಯಾವ ಒಂದು ಪಕ್ಷದ ಅಂಟನ್ನೂ ಅಂಟಿಸಿಕೊಳ್ಳದೇ ಈ ಸಭೆಯ ಕಾರ್ಯಕಲಾಪಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ನಿರ್ವಹಿಸುತ್ತೀರೆಂಬ ನಂಬಿಕೆ ನಮಗಿದೆ. ತಾವೇ ಈ ಅಧ್ಯಕ್ಷ ಚುನಾವಣೆಯಲ್ಲಿ ಗೆಲ್ಲುತ್ತೀರೆಂಬ ನಂಬಿಕೆ ನಮಗಿತ್ತೇ ವಿನಾ ಯಾವ ವಿಧವಾದ ಅನುಮಾನವೂ ಇರಲಿಲ್ಲ. ಆದರೆ ಸ್ಪರ್ಧೆಯೇ ಇಲ್ಲದಿದ್ದರೆ ಚೆನ್ನಾಗಿರುವುದಿಲ್ಲವೆಂದು ಸ್ಪರ್ಧಿಸಿದ್ದೇ ವಿನಾ ನಾವು ಗೆಲ್ಲುತ್ತೇವೆಂಬ ಆಸೆ ಅಥವಾ ನಿರೀಕ್ಷೆ ನಮಗೆ ಇರಲಿಲ್ಲ; ಇದರ ಫಲಿತಾಂಶ ಬೇರೆ ರೀತಿ ಆಗುತ್ತದೆಂದು ನಂಬಿರಲಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಒಡಕಿದೆಯೆಂದು ಗೊತ್ತಿದ್ದರೂ ಸಂದರ್ಭ ಬಂದಾಗ ತಮ್ಮಲ್ಲಿ ಒಡಕೆಷ್ಟೇ ಇದ್ದರೂ ಎಲ್ಲರೂ ಒಂದಾಗುತ್ತಾರೆಂಬುದು ಹೋದ ಚುನಾವಣೆಯಿಂದ ನಮ್ಮ ಅನುಭವಕ್ಕೆ ಬಂದಿದೆ. ಒಡಕಿದೆ ಎಂಬ ಭಾವನೆಯಿಂದ ನಾವು ಸ್ಪರ್ಧಿಸಲಿಲ್ಲ; ವಿರೋಧ ಪಕ್ಷದಿಂದ ವಿರೋಧವಿರಲಿ ಎಂಬ ಉದ್ದೇಶದಿಂದ ಶ್ರೀಮಾನ್ ಗೋಪಾಲಗೌಡರು ಉಮೇದುವಾರರಾಗಿ ನಿಂತರು. ಅವರ ಸೋಲನ್ನು ಅವರು ಬಹಳ ಸ್ಪೋರ್ಟಿಂಗ್ ಆಗಿ ತಗೆದುಕೊಂಡಿದ್ದಾರೆ. ಶ್ರೀಮಾನ್ ಶಂಕರಲಿಂಗೇಗೌಡರು ಈ ವಿಷಯದಲ್ಲಿ ಎಷ್ಟೋ ವಿಧವಾದ ಅರ್ಥವನ್ನು ಕಲ್ಪಿಸಿ ಹೇಳಿದರು, ಅದರಲ್ಲಿ ಏನೂ ಅರ್ಥವಿಲ್ಲ. ಶ್ರೀಮಾನ್ ಗೋಪಾಲಗೌಡರು ಸ್ಪೋರ್ಟಿಂಗ್ ಆಗಿ ಸ್ಪರ್ಧೆಗೆ ನಿಂತರು. ಈಗ ಅವರು ಪರಾಜಿತರಾಗಿದ್ದಾರೆ, ತಾವು ಗೆದ್ದಿದ್ದೀರಿ. ಕಾಂಗ್ರೆಸ್ ಪಕ್ಷದ ಬೆಂಬಲದಿಂದ ಗೆದ್ದರೂ ಅವರ ಬೆಂಬಲವಿರಬೇಕೆಂದು ಯಾವ ಪಕ್ಷಪಾತವೂ ಇಲ್ಲದೆ ಮುಂದೆ ಯಾವ ಪಾರ್ಟಿಯಗೋಜಿಗೂ ಹೋಗದೆ, ನಿಷ್ಪಕ್ಷಪಾತವಾಗಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುತ್ತೀರೆಂದು ನನಗೆ ನಂಬಿಕೆ ಇದೆ. ತಾವು ಐದು ವರ್ಷಗಳ ಕಾಲ ಅಧ್ಯಕ್ಷಪೀಠವನ್ನಲಂಕರಿಸುತ್ತೀರಿ. ಈ ಅವಧಿಯಲ್ಲಿ ನಮ್ಮ ಸಹಾನುಭೂತಿ ಮತ್ತು ಸಹಕಾರವನ್ನು ಯಾವಾಗಲೂ ನೀಡುವುದಕ್ಕೆ ನಾವು ಸಿದ್ಧರಾಗಿದ್ದೇವೆಂದು ಹೇಳಿ ಮತ್ತೊಮ್ಮೆ ತಮ್ಮನ್ನು ಅಭಿನಂದಿಸುತ್ತೇನೆ.

(*Sri M. Chiklingiah rose to sgeak.*)

**Mr. SPEAKER.**—May I know how long we have to go on with such felicitations? I seek the opinion of the House.

**Janab J. MOHAMED IMAM** (Jagalur).—We can close it at five.

**Sri K. HANUMANTHAIYA** (Leader of the House).—I agree to the suggestion of Janab Imam.

**Mr. SPEAKER.**—Yes, then the Hon'ble Member will take only three minutes.

ಶ್ರೀ ಎಂ. ಚಿಕ್ಕಲಿಂಗಯ್ಯನವರು (ಮಳವಳ್ಳಿ—ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ಹೆಚ್ಚಾಗಿ ಏನೂ ಹೇಳುವುದಿಲ್ಲ. ವೈಯಕ್ತಿಕವಾಗಿ ಮತ್ತು ಸಾಂಪ್ರದಾಯಿಕವಾಗಿ ನಾನು ಅಭಿನಂದಿಸುತ್ತಿದ್ದೇನೆ. ಆದರೆ ತಮ್ಮ ವಿಚಾರದಲ್ಲಿ ಹೆಚ್ಚು ಹೊಗಳುವುದಕ್ಕೆ ನಿಂತಿಲ್ಲ. ರಾಜಕೀಯಕ್ಕೆ ನಾನು ಹೊಸಬ. ತಮ್ಮ ಕಾರ್ಯಕಲಾಪಗಳ ವಿಷಯವಾಗಿ ಈಗಾಗಲೇ ಅನೇಕ ಮಹನೀಯರು ಹೊಗಳಿದ್ದಾರೆ. ನಾನು ತಿಳಿದುಕೊಂಡಿರುವಂತೆ ನಾವು ನಮ್ಮ ಮುಖಂಡರನ್ನು ಹೆಚ್ಚು ಹೊಗಳಬಾರದು. ಸಂಪ್ರದಾಯವಿದ್ದರೂ ಇದು ಉತ್ತೇಜಕವಲ್ಲವೆಂದು ಕೆಲವರು ಮಹನೀಯರು ಹೇಳುತ್ತಾರೆ. ಆದಕ್ಕಾಗಿ ನಾನು ತಮ್ಮನ್ನು ಹೊಗಳುತ್ತಿಲ್ಲ. ಆದರೆ ಈ ಸಂದರ್ಭದಲ್ಲಿ ಒಂದೆರಡು ವಿಷಯಗಳನ್ನು ಮಾತ್ರ ತಮ್ಮ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ.

ನಾವು ಈ ದಿನ ನಿಜವಾದ ಪ್ರಜಾಪ್ರಭುತ್ವ ಶಾಸನ ಸಭೆಯಲ್ಲಿ ನೆರೆದಿದ್ದೇವೆ. ತಾವು ಯಾವ ಪಕ್ಷಕ್ಕೆ ಸೇರಿದ್ದರೂ ಈಗ ಎಲ್ಲಾ ಪಕ್ಷಗಳಿಗೂ ಸೇರಿದವರೆಂಬ ಭಾವನೆಯಿಂದ ತಮಗೆ ಪುರಸ್ಕಾರ ಕೊಡುತ್ತಿದ್ದೇವೆ. ನಿಜವಾದ ಪ್ರಜಾಪ್ರಭುತ್ವದ ತತ್ವವೇನೆಂಬುದನ್ನು ಪ್ರತಿಯೊಬ್ಬ ಸದಸ್ಯರೂ ಕೂಡ ಅರಿತು, ಮೊದಲನೆಯದಾಗಿ ಇದು ತಮ್ಮ ದೇಶವೆಂದೂ, ಎರಡನೆಯದಾಗಿ ಸತ್ಯ ಧರ್ಮ ಅಹಿಂಸೆಗಳನ್ನು ಕಾಪಾಡುವುದೇ ತಮ್ಮ ಗುರಿಯೆಂದೂ ಮತ್ತು ಮೂರನೆಯದಾಗಿ ಇದು ತಮ್ಮ ಸ್ವಂತಕ್ಕೆ ಸಂಬಂಧಿಸಿದ್ದೆಂದೂ ತಿಳಿದು ಈ ಮೂರು ಅಂಶಗಳನ್ನು ಎತ್ತಿ ಹಿಡಿದು, ದೇಶದಲ್ಲಿ ಉಂಟಾಗತಕ್ಕ ಕಷ್ಟ ನಿಷ್ಠೂರಗಳನ್ನು ಸರಿಯಾಗಿ ಪರಿಶೀಲಿಸಿ, ದೇಶಕ್ಕೆ ಒಳ್ಳೆಯದನ್ನು ಮಾಡಲು ಶ್ರಮಿಸಬೇಕು. ಇದು ಪ್ರಜಾಪ್ರಭುತ್ವದ ಮುಖ್ಯ ಗುಣವೆಂದು ನಾನು ತಿಳಿದುಕೊಂಡಿದ್ದೇನೆ. ಮುಖ್ಯವಾಗಿ ಈಗಿನ ಪರಿಸ್ಥಿತಿಯಲ್ಲಿ, ದೇಶದಲ್ಲಿ ಜನರು ಬಹಳ ಕಷ್ಟಕ್ಕೆ ಸಿಕ್ಕಿ ನರಳುತ್ತಿದ್ದಾರೆ. ಅದರಲ್ಲಿಯೂ ಬಡವರಾದವರು ಮತ್ತು ಹರಿಜನರು ಬಹಳ ಕಷ್ಟಪಡುತ್ತಿದ್ದಾರೆ. ಈ ಸಭೆ ದೇಶದ ಆಗು ಹೋಗುಗಳನ್ನು ಪರಿಶೀಲಿಸುವುದಕ್ಕೂ ಮತ್ತು ಸೂಕ್ತ ಶಾಸನ ಮಾಡುವುದಕ್ಕೂ ಇರುವುದು. ಆದುದರಿಂದ ತಾವು ನಿಷ್ಪಕ್ಷಪಾತವಾಗಿಯೂ ನಿರ್ದಾಕ್ಷಿಣ್ಯದಿಂದಲೂ ವರ್ತಿಸಿ ನ್ಯಾಯವನ್ನು ಎತ್ತಿ ಹಿಡಿಯುವುದು ತಮ್ಮ ಪ್ರಥಮ ಕರ್ತವ್ಯ. ಎರಡನೆಯದಾಗಿ, ಮೈಸೂರು ದೇಶ ಎಲ್ಲ ವಿಷಯಗಳಲ್ಲಿಯೂ ಮಾದರಿಯಾಗಿ ಆಡಳಿತದಲ್ಲಿ ದಕ್ಷತೆಯನ್ನು ಹೊಂದಿ, ವಿಶ್ವದಲ್ಲೇ ಒಳ್ಳೆಯ ಹೆಸರನ್ನು ಪಡೆದಿದೆ; ಮುಂದೆಯೂ ಪಡೆಯುವುದಾಗಿದೆ. ಪ್ರಜಾಪ್ರಭುತ್ವದಲ್ಲಿ ಹಿಂದಿನ ಮಂತ್ರಿಮಂಡಲದಿಂದ ಪ್ರಜೆಗಳು ಎಷ್ಟು ನಿರೀಕ್ಷಣೆ ಮಾಡಿದ್ದರೋ ಅಷ್ಟು ಅನುಕೂಲ ಒದಗಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

**Mr. SPEAKER.**—May I know how it is relevant to the occasion?

**Sri M. CHIKKALINGIAH.**—I am coming to a close, Sir. My idea is only to bring to your notice that such things should not be repeated, because we are going to settle the destiny of the whole country. We must have some ideas to begin with; we must have some data, that is my idea.

ದೇಶದ ಆಗುಹೋಗುಗಳನ್ನು ಸರಿಯಾದ ರೀತಿಯಲ್ಲಿ ಪರಿಶೀಲಿಸಿ, ನಿರ್ದಾಕ್ಷಿಣ್ಯದಿಂದಲೂ ನಿಷ್ಪಕ್ಷಪಾತವಾ

(SRI M. CHIKKALINGIAH.)

ಗಿಯೂ ವರ್ತಿಸಿ ದೇಶಕ್ಕೆ ಕಲ್ಯಾಣವನ್ನುಂಟುಮಾಡಬೇಕೆಂದು ತಮ್ಮಲ್ಲಿ ಅರಿಕೆ. ಮೂರನೆಯದಾಗಿ ತಾವು ಅಧ್ಯಕ್ಷರಾಗಿ ಚುನಾಯಿತರಾಗಿ ಬಂದಿರುವುದು ನಮ್ಮ ದೇಶದ ಪುಣ್ಯವೆಂದು ಹೇಳಿ ತಮ್ಮನ್ನು ಮತ್ತೊಮ್ಮೆ ಅಭಿನಂದಿಸಿ ತಮ್ಮಿಂದ ದೇಶಕ್ಕೆ ಕಲ್ಯಾಣವುಂಟಾಗಲೆಂದು ಹೇಳಿ ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯನವರು (ಕಡೂರು).— ಯಜಮಾನ್ ಸಿದ್ದಯ್ಯನವರೆ, ನಮ್ಮ ಕಾಂಗ್ರೆಸ್ಸಿನ ಯಜಮಾನರಾಗಿದ್ದ ತಾವು ಈ ದಿವಸ ಈ ಸಭೆಯ ಅಧ್ಯಕ್ಷ ಪದವಿಗೆ ಬಂದುದಕ್ಕಾಗಿ ನನಗಂತೂ ಬಹಳ ಆನಂದವಾಗಿದೆ. ತಾವು 1939ನೆಯ ಇಸವಿಯಲ್ಲಿ ಕಾರಾಗೃಹವಾಸವನ್ನನುಭವಿಸುತ್ತಿದ್ದಾಗ ನಾನು ಕೂಡ ಅಲ್ಲಿಯೇ ಇದ್ದೆ. ಮೊದಲನೆಯ ದಿನ ನಾನು ಜೈಲಿಗೆ ಹೋದ ಕಾಲದಲ್ಲಿ ಅಲ್ಲಿ ತಮ್ಮನ್ನೂ ಮತ್ತು ಸುಬ್ರಹ್ಮಣ್ಯರವರನ್ನೂ ಭೇಟಿ ಮಾಡಿದ ಕಾಲದಲ್ಲಿ ಬಹಳ ಸಂಕಟವಾಯಿತು. ಆಗ ತಾವು ಪಟ್ಟ ಕಷ್ಟ ಮತ್ತು ಮಾಡಿದ ತ್ಯಾಗದ ಫಲ ಈ ದಿವಸ ತಮಗೆ ದೊರೆಯಿತೆಂದು ಹೇಳಬಹುದು. ಆಗ ಜೈಲಿನಲ್ಲಿ ಸಿಕ್ಕರು ಜುಬ್ಬ ಹಾಕಿ, ನಮ್ಮನ್ನೆಲ್ಲಾ ಊಟಕ್ಕೆ ಕರೆದುಕೊಂಡುಹೋಗಿ ತಾವು ಭಂಗಾರದ ಪಾತ್ರೆಯಲ್ಲಿ ಅನ್ನ ಸಾರು ತಂದುಕೊಟ್ಟದ್ದನ್ನು ನಾವೆಲ್ಲ ಜೊತೆಯಲ್ಲಿ ಊಟಮಾಡಿದೆವು. ತಮ್ಮ ಕೈಯ್ಯಲ್ಲಿ ಗುಳ್ಳೆ ಬಂದಿತ್ತು; ಅದನ್ನು ನೋಡಿ ಅದೇನು ಸ್ವಾಮಿ ಎಂದು ನಾನು ಕೇಳಿದಾಗ, ಅದು ರಾಗಿ ಬೀಸಿದ ಪ್ರಭಾವ ಎಂದು ತಾವು ಹೇಳಿದಿರಿ. ಈ ಸಂದರ್ಭದಲ್ಲಿ ಅದೆಲ್ಲ ಜ್ಞಾಪಕಕ್ಕೆ ಬರುತ್ತಿದೆ. ತಮ್ಮ ತ್ಯಾಗವನ್ನು ಹೆಚ್ಚು ಹೊಗಳುವುದಕ್ಕೆ ಈಗ ನಾನು ಹೋಗುವುದಿಲ್ಲ. ತಾವು ಜೈಲಿಗೆ ಹೋಗಿ ಅಲ್ಲಿ ಎಷ್ಟೋ ಕಷ್ಟವನ್ನನುಭವಿಸುತ್ತಿದ್ದರೂ ಕೂಡ ಅಲ್ಲಿ ಕ್ರಿಮಿನಲ್ ಖೈದಿಗಳ ಪರವಾಗಿ ಮುಫತ್ತಾಗಿ ವಕೀಲ ಕೆಲಸ ಮಾಡಲು ಅವಕಾಶ ಕೊಡಬೇಕೆಂದು ಸರ್ಕಾರವನ್ನು ಕೇಳಿದಿರಿ. ಅದು ದೊರೆತನಂತರ ಹತ್ತಾರುವರ್ಷಗಳ ಸಜಾ ಆಗುವ ಕ್ರಿಮಿನಲ್ ಖೈದಿಗಳನ್ನು ಬಿಡುಗಡೆಮಾಡಿಸಿದಿರಿ. ಹೀಗೆ ಬಿಡುಗಡೆ ಮಾಡಿಸಿದಿರೆಂದು ತಮ್ಮನ್ನು ಬೇರೆ ಜೈಲಿಗೆ ಕಳುಹಿಸಿದರು. ಜೈಲಿನ ಖೈದಿಗಳು ತಮ್ಮನ್ನು ಗುರುಗಳೋಪಾದಿಯಲ್ಲಿ ಕಾಣುತ್ತಿದ್ದರು. ತಮ್ಮನ್ನು ಸಿದ್ದಪ್ಪಸ್ವಾಮಿ ಎಂತಲೂ ಶ್ರೀಮಾನ್ ಸುಬ್ರಹ್ಮಣ್ಯಂವರನ್ನು ಸುಬ್ರಹ್ಮಣ್ಯಸ್ವಾಮಿ ಎಂತಲೂ ಕರೆಯುತ್ತಿದ್ದರು. ಅದು ಈಗಲೂ ನನಗೆ ಜ್ಞಾಪಕವಿದೆ. 1940ನೆಯ ಇಸವಿಯಲ್ಲಿ ತಾವು ಜೈಲಿನಲ್ಲಿದ್ದಾಗ ಶಿವಮೊಗ್ಗದಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ ಶ್ರೀಮಾನ್ ಭಾಷ್ಯಂರವರು ಅಧ್ಯಕ್ಷರಾಗಿ, ಅಧ್ಯಕ್ಷರ ಮೆರವಣಿಗೆ ತಮ್ಮ ಮನೆಯಮುಂದೆ ಹೋದಾಗ ತಮ್ಮ ಮಕ್ಕಳುಮರಿಗಳನ್ನು ನೋಡಿ, ಅಲ್ಲಿ ತಾವಿಲ್ಲದೇಯಿರುವುದನ್ನು ಕಂಡು ನಾಲ್ಕಾರು ಸಾವಿರ ಜನರು ಕಣ್ಣೀರು ಸುರಿಸಿದರು. ತಾವು ನಮ್ಮ ಮೈಸೂರು ಕಾಂಗ್ರೆಸ್ಸಿನವರಲ್ಲಿ ದೊಡ್ಡ ತ್ಯಾಗಿಗಳು. ಇದಕ್ಕೂ ಮಿಗಿಲಾಗಿ ತಮ್ಮಲ್ಲಿರತಕ್ಕ ಸ್ನೇಹಭಾವ, ಸೌಹಾರ್ದ ಮತ್ತು ಸೌಜನ್ಯ ಇವುಗಳನ್ನೆಲ್ಲಾ ನೋಡಿ ಮೈಸೂರು ಕಾಂಗ್ರೆಸ್ಸಿನವರು ತಮ್ಮನ್ನು ಅಧ್ಯಕ್ಷಸ್ಥಾನಕ್ಕೆ ನಿಲ್ಲಿಸಿದರು. ಇವರೊಡನೆ ಇತರರು ಕೆಲವರೂ ಮತಕೊಟ್ಟು ತಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಮೊದಲನೆಯದಾಗಿ, ತಾವು ವಯಸ್ಕರ ಮತದಾನ ಪದ್ಧತಿಯ ಮೇಲೆ ಸುಮಾರು ನಲವತ್ತುಲಕ್ಷ ಪ್ರಜೆಗಳ ಓಟುಗಳಿಂದ ಚುನಾಯಿತರಾಗಿರುವ ಪ್ರತಿನಿಧಿಗಳ ಈ ಸಭೆಗೆ ಅಧ್ಯಕ್ಷರಾಗಿದ್ದೀರಿ. ತಮ್ಮ ಗುಣಗಾನಮಾಡುತ್ತಾ ಹೋದರೆ ಎಷ್ಟೋ ಮಾಡಬಹುದು. ಬಹಳ ಹೆಚ್ಚು ಕಾಲ ಹಿಡಿಯುವುದರಿಂದ ನಾನು ಅದಕ್ಕೆ ಹೋಗುವುದಿಲ್ಲ; ಆದರೂ ಅನೇಕ ವಿಷಯಗಳು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತವೆ. ಹಿಂದೆ ಅನೇಕ ಜನರು ತಮ್ಮನ್ನು ಹೀಗೆ ಕಾಂಗ್ರೆಸ್ ಕೆಲಸವನ್ನೇ ಮಾಡುತ್ತಾ ಕುಳಿತರೆ ಮುಂದೆ ಜೀವನ ಮಾಡುವುದು ಹೇಗೆಂದು ಕೇಳಿದಾಗ, ನನಗೆ ಜೋಳಿಗೆ ಇದ್ದೇ ಇದೆ, ದೇಶಕ್ಕೆ ಸ್ವರಾಜ್ಯ ಬಂದರೆ ಸಾಕು ಎಂದು ತಾವು ಹೇಳುತ್ತಿದ್ದುದು ನನಗೆ ಜ್ಞಾಪಕವಿದೆ. ಇದೆಲ್ಲದರ ಫಲವಾಗಿ ಈ ದಿವಸ ತಮಗೆ ಅಧ್ಯಕ್ಷ ಪದವಿ ಬಂದಿದೆಯೆಂದು ಹೇಳಿದರೆ ತಪ್ಪಾಗಲಾರದು. ತಾವೂ ಕೂಡ, ಈಗ ಕೆಲವು ನಿಮಿಷಗಳವರೆಗೂ ನಮ್ಮ ಈ ಸಭೆಗೆ ಅಧ್ಯಕ್ಷರಾಗಿದ್ದು ಕೀರ್ತಿ ಪಡೆದು ಮತ್ತು ಎಲ್ಲ ಜನರಿಂದಲೂ ದೊಡ್ಡ ಹೆಸರು ಪಡೆದು ದೇಶ ಕಲ್ಯಾಣಕ್ಕಾಗಿ ಶ್ರಮಿಸಿದ ಶ್ರೀಮಾನ್ ವೆಂಕಟಪ್ಪನವರ ಮೇಲ್ಪಂಕ್ತಿಯನ್ನು ಹಿಡಿದು, ತಮ್ಮ ಅಧಿಕಾರಾವಧಿಯ ಐದು ವರ್ಷಗಳಲ್ಲಿ ಈ ಸಭೆಯನ್ನು ದೇಶಕ್ಕೆ ಮಾದರಿಯನ್ನಾಗಿ ಮಾಡಬೇಕಲ್ಲದೆ, ದೇಶಕ್ಕೆ ತಮ್ಮಿಂದ ಕಲ್ಯಾಣವಾಗುವಂತೆ ತಮಗೆ ಭಗವಂತನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಈಗ ಕೆಲವು ನಿಮಿಷಗಳವರೆಗೆ ಅಧ್ಯಕ್ಷರಾಗಿದ್ದ ಶ್ರೀಮಾನ್ ವೆಂಕಟಪ್ಪನವರು ಕಾಂಗ್ರೆಸ್‌ನವರೆಲ್ಲರಿಗೂ ಬಹಳ ಪರಿಚಿತರು. ಅವರು ವಿದ್ಯಾಭ್ಯಾಸಮಾಡುತ್ತಿದ್ದ ಕಾಲದಿಂದಲೂ ದೇಶಸೇವೆ ಮಾಡುತ್ತಿದ್ದಾರೆ. ಹಿಂದೆ ಒಂದು ಗ್ರಾಮದಲ್ಲಿ ಒಂದು ಘಟನೆ ನಡೆಯಿತು. ಆ ಕಾಲದಲ್ಲಿ ಸತ್ಯಾಗ್ರಹ ನಡೆಯುತ್ತಿತ್ತು. ಅಂತಹ ಸಂದರ್ಭದಲ್ಲಿ ಎದೆಗುಂದದವೆ, ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಜವಾಬ್ದಾರಿ ಸರ್ಕಾರ ಸ್ಥಾಪನೆಮಾಡುವುದೊಂದೇ ತಮ್ಮ ಗುರಿ ಎಂದು ದುಡಿದರು. ಇಂತಹ ಮಹನೀಯರು ಕಳೆದ ನಾಲ್ಕು ವರ್ಷಕಾಲ ಈ ಸಭೆಯ ಅಧ್ಯಕ್ಷ ಪದವಿಯನ್ನನುಭವಿಸಿ ಈಗ ಆ ಸ್ಥಾನವನ್ನು ತಮಗೆ ಬಿಟ್ಟುಕೊಟ್ಟಿದ್ದಾರೆ. ನಾನು ಅವರಿಗೂ ಕೂಡ ಅಭಿನಂದನೆಯನ್ನು ಸಲ್ಲಿಸಿ ಅವರು ಮುಂದೆಯೂ ಹೀಗೆಯೇ ದೇಶಸೇವೆ ಸಲ್ಲಿಸುತ್ತಿರಬೇಕೆಂದು ಬೇಡುತ್ತೇನೆ.

ಶ್ರೀ ಟಿ. ಮಾಧವಾಚಾರ್ಯರು (ಭದ್ರಾವತಿ).— ಸ್ವಾಮಿ, ಪ್ರಜಾಪ್ರಭುತ್ವದ ತಳಹದಿಯ ಮೇಲೆ ಹೊಸದಾಗಿ ಚುನಾಯಿಸಲ್ಪಟ್ಟಿರತಕ್ಕ ಈ ಶಾಸನ ಸಭೆಗೆ ಪ್ರಥಮತಃ ತಾವು ಅಧ್ಯಕ್ಷರಾಗಿ ಬಂದಿರುವುದಕ್ಕಾಗಿ ನಾನು ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈಗತಾನೆ ಅನೇಕ ಸದಸ್ಯರು ತಮ್ಮ ಗೌರವ, ಘನತೆ ಮತ್ತು ಗುಣಗಾನಗಳನ್ನು ವಿಶೇಷರೀತಿಯಲ್ಲಿ ವರ್ಣಿಸಿದ್ದಾರೆ. ಆದುದರಿಂದ ಆ ಬಗ್ಗೆ ನಾನು ಹೆಚ್ಚಾಗಿ ಮಾತನಾಡಲು ಇಷ್ಟಪಡುವುದಿಲ್ಲ. ಈಗ ತಾವು ಆರಿಸಿ ಬಂದಿರುವ ಈ ಒಂದು ಗೌರವ ಸ್ಥಾನದಲ್ಲಿ ತಾವು ಯಾವ ರೀತಿ ಔಚಿತ್ಯದಿಂದ ವರ್ತಿಸಬೇಕೆಂದು ಸಕಲ ಸದಸ್ಯರೂ ನಿರೀಕ್ಷಣೆ ಮಾಡುತ್ತಿದ್ದಾರೋ ಆ ನಿರೀಕ್ಷಣೆಗೆ ತಕ್ಕಂತೆ ತಾವು ಬಹು ಯಶಸ್ವಿಯಾಗಿ ಅವರ ಆಸೆಯನ್ನು ಪೂರೈಸಬಲ್ಲಿರೆಂದು ನಾನು ನಂಬಿದ್ದೇನೆ. ಈಗ ಮೈಸೂರು ದೇಶದಲ್ಲಿ ಜನಜಾಗ್ರತಿ ಉಂಟಾಗಿದೆ. ಪ್ರಜಾ ಸರ್ಕಾರದ ಸ್ಥಾಪನೆಗಾಗಿ ಹೋರಾಟ ನಡೆಸಿದ ಕಾಂಗ್ರೆಸ್ ಪ್ರಮುಖರಲ್ಲಿ ತಾವು ಮುಖ್ಯ ನಾಯಕರಾಗಿದ್ದೀರಿ. ಜನರ ಹಿತರಕ್ಷಣೆಗಾಗಿ ಮತ್ತು ಜನ ಜಾಗೃತಿಗಾಗಿ ಬಹಳ ಕನಿಕರದಿಂದ ಕಷ್ಟಪಟ್ಟು ಕೆಲಸ ಮಾಡತಕ್ಕ ಅವಕಾಶವನ್ನು ಕಲ್ಪಿಸಿಕೊಟ್ಟಂಥ ನಾಯಕರಲ್ಲಿ ತಾವು ಅಗ್ರಗಣ್ಯರು. ಮೈಸೂರು ಶಾಸನ ವಿಧಾಯಕ ಸಭೆಯಲ್ಲಿ

ಕಳೆದ 20—25 ವರ್ಷಗಳಿಂದಲೂ ತಾವು ಕೆಲಸ ಮಾಡುತ್ತಿದ್ದುದರಿಂದ, ತಾವು ನಾನಾತರದ ಪ್ರತಿನಿಧಿಗಳಲ್ಲಿ ಬೆರೆತು, ಅವರೆಲ್ಲರ ಮನೋಭಾವವನ್ನು ತಿಳಿದವರಾಗಿರುವುದೇ ಅಲ್ಲದೆ, ನಾನಾ ನಿಯಮ ನಿಬಂಧನೆಗಳ ಅರ್ಥ ಮತ್ತು ಅವುಗಳ ಮರ್ಮಗಳನ್ನೂ ಸಹ ತಾವು ತಿಳಿದವರಾಗಿದ್ದೀರಿ. ಈ ದಿವಸ ಪ್ರಥಮ ಪ್ರಜಾಪ್ರಭುತ್ವ ತತ್ವದ ಮೇಲೆ ಆರಿಸಿ ಬಂದ ಈ ಸಭೆಗೆ ತಾವು ಅಧ್ಯಕ್ಷರಾಗಿರುವುದರಿಂದ ತಮ್ಮ ಮೇಲೊಂದು ಹೆಚ್ಚಿನ ಜವಾಬ್ದಾರಿ ಬಿದ್ದಿದೆ.

ಈಗ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ದೇಶದ ಭವಿತವ್ಯವನ್ನು ಸುರಕ್ಷಿತವಾಗಿ ಉಳಿಸಿಕೊಳ್ಳುವ, ಹಾಗೂ ಈ ದಿವಸ ದೇಶದಲ್ಲಿ ಉದ್ಭವಿಸಿರುವ ನಿರುದ್ಯೋಗ ಸಮಸ್ಯೆ, ಅನ್ನ-ಆಹಾರಗಳ ಅಭಾವ.........

**Sri A. BHEEMAPPA NAIK** (Chitaldrug).—I rise to a point of order. Sir. This is not the place where we can speak about all matters connected with the country. It is only an occasion to say just a few words felicitating the Speaker. My friend begins to speak as though he is solving the problems of the country.

**Mr. SPEAKER**—Quite so. This is not the occasion, for the Hon'ble Member to refer to all matters.

**Janab J. MOHAMED IMAM** (Chitaldrug).—I support my friend. This is not the time and the occasion. This is the occasion to offer congratulations to you, Sir. This is not the occasion or the time when we will have to go back into the past history of the Congress. Of course, there are other occasions. Certainly, this is not the occasion to go back into the history and to recount what happened previously.

**Mr. SPEAKER.**—That is all right. The Hon'ble Member has already understood the point.

ಶ್ರೀ ಬಿ. ಮಾಧವಾಚಾರ್ಯರು.—ಈ ದಿವಸ ನಾನು ಈ ವಿಷಯಗಳ ಬಗ್ಗೆ ಏತಕ್ಕಾಗಿ ಒಂದೆರಡು ಪದಗಳನ್ನು ಉಪಯೋಗಿಸಿದೆನೆಂದರೆ, ಈ ಶಾಸನ ಸಭಾಸದಸ್ಯರ ಮೇಲೆ ಒಂದು ದೊಡ್ಡ ಜವಾಬ್ದಾರಿಬಿದ್ದಿದೆ. ಮನುಷ್ಯನಿಗೆ ಇರತಕ್ಕ ಅಂಗಾಂಗಗಳಲ್ಲಿ ತಲೆಯು ಎಷ್ಟು ಪ್ರಾಧಾನ್ಯವಾದುದೋ, ಹಾಗೆ ಸಮಾಜದಲ್ಲಿರತಕ್ಕ ಕಷ್ಟನಷ್ಟಗಳನ್ನು ಪರಿಹರಿಸುವುದಕ್ಕೆ ಈ ಶಾಸನ ಸಭೆಯೂ ಅಷ್ಟೇ ಪ್ರಾಧಾನ್ಯತೆಯುಳ್ಳದ್ದು ಮತ್ತು ಅಂಥ ಒಂದು ಜವಾಬ್ದಾರಿ ಇದರ ಮೇಲಿದೆ. ಈ ಸಭೆಯಲ್ಲಿ ಹೊಸದಾಗಿ ಈಗತಾನೆ ಬಂದಿರತಕ್ಕ ತರುಣರೂ ಬಹಳವಾಗಿದ್ದಾರೆ. ಅನುಭವಿಗಳೂ ಕೂಡ ಅನೇಕರಿದ್ದಾರೆ ಇವರೆಲ್ಲರನ್ನೂ ಸರಿಯಾದ ರೀತಿಯಲ್ಲಿ ನೋಡಿಕೊಂಡು ಹೋಗತಕ್ಕ ಯೋಗ್ಯತೆ ತಮ್ಮಲ್ಲಿದೆ ಮತ್ತು ಈ ಬಗ್ಗೆ ತಾವು ಒಬ್ಬ ಮಾರ್ಗದರ್ಶಕರಾಗುವಿರೆಂಬುದನ್ನು ತಿಳಿಸಲು ನಾನು ತುಂಬಾ ಸಂತೋಷಪಡುತ್ತೇನೆ. ಆದುದರಿಂದ ದೇಶಾಭಿವೃದ್ಧಿಯ ಬಗ್ಗೆ ಆಗಬೇಕಾದ ಕೆಲಸಕಾರ್ಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು, ಕೇವಲ ಹಾಸ್ಯಗಳಲ್ಲಿ ಕಾಲ ಕಳೆಯದೆ, ಅದಕ್ಕೆ ಬದಲಾಗಿ ಆಸಕ್ತಿಯಿಂದ ಕೆಲಸಮಾಡುವುದಕ್ಕೆ ಅದಷ್ಟೂ ಅವಕಾಶ ಸಿಕ್ಕಬೇಕೆಂಬ ಉದ್ದೇಶದಿಂದ ನಾನು ಆ ಮಾತನ್ನು ಎತ್ತಿದೆನು.

ಈ ಸಭೆಯ ಮತ್ತು ಸಭಾಪತಿಗಳ ಗೌರವ ಮತ್ತು ಘನತೆಗಳು ಹೆಚ್ಚಿ, ತಮ್ಮಿಂದ ಸರ್ವಪಕ್ಷಗಳೂ ಯಾವ ಒಂದು ನಿರೀಕ್ಷಣೆಯನ್ನು ಅಪೇಕ್ಷೆಮಾಡುತ್ತಿದ್ದಾರೋ ಆ ನಿರೀಕ್ಷಣೆಯನ್ನು ತಾವು ಯಶಸ್ವಿಯಾಗಿ ಮತ್ತು ಸಂಪೂರ್ಣವಾಗಿ ನಡೆಸಿಕೊಂಡುಬರಲು ಭಗವಂತನು ತಮಗೆ ಸರ್ವ ಶಕ್ತಿಸಾಮರ್ಥ್ಯಗಳನ್ನೂ ಕರುಣಿಸಲೆಂದು ಹಾರೈಸಿ ತಮ್ಮನ್ನು ಮತ್ತೊಮ್ಮೆ ಅಭಿನಂದಿಸಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಆರ್. ಅನಂತರಾಮಯ್ಯರವರು (ಚಾಮರಾಜಪೇಟೆ).—ಸ್ವಾಮಿ, ನಮ್ಮ ನಾಯಕರಾದ ಶ್ರೀ ಕೆ. ಹನುಮಂತಯ್ಯನವರು ತಮ್ಮ ಗುಣಗಾನವನ್ನು ಬಹಳವಾಗಿ ಈಗಾಗಲೇ ಮಾಡಿದ್ದಾರೆ. ಆದುದರಿಂದ ನಾನು ಹೆಚ್ಚಿಗೆ ಏನನ್ನೂ ಹೇಳಬಯಸದೆ ಒಂದೆರಡು ವಿಷಯಗಳನ್ನು ಮಾತ್ರ ತಿಳಿಸುತ್ತೇನೆ. ನಮ್ಮ ದೇಶದಲ್ಲಿ ಹೊಸ ಕಾನೂನಿಗನುಸಾರವಾಗಿ ವಯಸ್ಕರ ಮತದಾನ ಪದ್ಧತಿಯ ಮೇಲೆ ಚುನಾವಣೆಯಾಗಿ, ರಚಿತವಾಗಿರತಕ್ಕ ಈ ಮೊಟ್ಟಮೊದಲನೆಯ ಸಭೆಗೆ ತಾವು ಅಧ್ಯಕ್ಷರಾಗಿ ಆರಿಸಿಬಂದಿರತಕ್ಕದ್ದು ಬಹಳ ಸಂತೋಷ ಮತ್ತು ತಮಗೆ ಇಂದು ದೊರೆತಿರುವುದೂ ಒಂದು ದೊಡ್ಡ ಪದವಿ. ಇಲ್ಲಿಂದ ಮುಂದಕ್ಕೆ ಈ ಸಭೆಯು, ನಡೆಯುವ ಕಾರ್ಯಕಲಾಪಗಳ ಬಗ್ಗೆ, ಒಂದು ಸತ್ಸಂಪ್ರದಾಯವನ್ನು ಬೆಳೆಸಿಕೊಂಡು ಬರಬೇಕಾಗಿದೆ.

ಎರಡನೆಯದಾಗಿ, ದೇಶಕ್ಕೂ ಜನರಿಗೂ ನಮ್ಮ ಸೇವೆಯನ್ನು ನಿರ್ವಂಚನೆಯಾಗಿ ಸಲ್ಲಿಸತಕ್ಕದ್ದು. ತಮ್ಮಲ್ಲಿ ಒಂದು ದೊಡ್ಡಗುಣವಿದೆ: ಅದು ಎಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಇವರು ಚಿಕ್ಕವರು, ಅವರು ದೊಡ್ಡವರು ಎಂಬ ಭೇದಭಾವವಿಲ್ಲದೆ ಎಲ್ಲರಲ್ಲೂ ಒಂದೇ ರೀತಿಯಾಗಿ ವರ್ತಿಸುವಂಥ ಒಂದು ದೊಡ್ಡ ಗುಣ ತಮ್ಮಲ್ಲಿದೆ. ಇಂಥ ಒಂದು ದೊಡ್ಡ ಗುಣವಿರತಕ್ಕವರು ಇಂದು ನಮಗೆ ಮಾರ್ಗದರ್ಶಕರಾಗಿರತಕ್ಕದ್ದು ನಮಗೆಲ್ಲರಿಗೂ ಒಂದು ಹೆಮ್ಮೆಯಾಗಿದೆ. ಈ ಅಧ್ಯಕ್ಷ ಪದವಿಯೇನೂ ಒಂದು ಹೂವಿನ ಸುಪ್ಪತ್ತಿಗೆಯಲ್ಲ, ಇದು ಮುಳ್ಳಿನ ಹಾಸಿಗೆ. ಎಷ್ಟೋಸಾರಿ ನಮ್ಮ ನಮ್ಮ ಪಕ್ಷಗಳವರೇ ನಮಗೆ ಕಷ್ಟಕೊಡಬಹುದಾದಂಥ ಸಂದರ್ಭಗಳೂ ಬಂದಿವೆ. ಈ ಸ್ಥಾನಕ್ಕೆ ಬರತಕ್ಕ ಅಧ್ಯಕ್ಷರು ಬಹಳ ಶಾಂತಚಿತ್ತರಾಗಿರಬೇಕು ಮತ್ತು ನಿಷ್ಪಕ್ಷಪಾತಿಗಳಾಗಿರಬೇಕು. ಆ ಗುಣವೂ ಸಹ ತಮ್ಮಲ್ಲಿದೆ. ತಮ್ಮ ಹೆಸರು ಸಿದ್ದಯ್ಯ ಎಂದು. ಸಿದ್ಧರು ಎಂದು ಹೇಳಿದರೆ ಸಮರ್ಥರು ಎಂದು ಅರ್ಥವಾಗುತ್ತದೆ. ಎಲ್ಲಾ ಕಷ್ಟ ಸುಖವನ್ನೂ ಅನುಭವಿಸಿ ಈ ದಿವಸ ಸಮರ್ಥರಾಗಿದ್ದೀರಿ. ಅದಕ್ಕೆ ಸರಿಯಾಗಿ ಆ ಹೆಸರು ಮತ್ತು ಸಾಮರ್ಥ್ಯವುಳ್ಳ ತಮ್ಮನ್ನು ಈ ಸ್ಥಾನಕ್ಕೆ ಸೂಚಿಸಿ ನೇಮಕಮಾಡಿರುವುದು ನಮ್ಮ ಸುಯೋಗವೆಂದು ಹೇಳಬೇಕಾಗಿದೆ. ಹೆಚ್ಚಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ತಾವು ಅಲಂಕರಿಸಿರುವ ಅಧ್ಯಕ್ಷಸ್ಥಾನಕ್ಕೆ ಗೌರವ ಕೊಟ್ಟು ನಾವುಗಳೆಲ್ಲರೂ ತಮ್ಮೊಡನೆ ಸಹಕರಿಸುತ್ತೇವೆಂದು ಹೇಳಿ ತಮ್ಮ ಸ್ಥಾನದ ಕೆಲಸ ಯಶಸ್ವಿಯಾಗಿ ನಡೆಯಲಿ ಎಂದು ಹಾರೈಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ಮಾದಯ್ಯನವರು (ನಂಜನಗೂಡು-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಮಾನ್ಯ ಸಭೆಯ

(ಶ್ರೀ ಎಂ. ಮಾದಯ್ಯನವರು.)

ಅಧ್ಯಕ್ಷರಾಗಿ ಬಹುಮತದಿಂದ ಚುನಾಯಿತರಾಗಿರುವ ತಮಗೆ ಈ ಸಭೆಯ ಪರವಾಗಿ ನಾನು ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಾಗೆ ಸಲ್ಲಿಸುವಾಗ ತಮ್ಮ ವಿಚಾರದಲ್ಲಿ ಹೆಚ್ಚಾಗಿ ಹೇಳದೆ ನನ್ನ ಹಿಂದೆ ಮಾತನಾಡಿರತಕ್ಕಂಥ ನಮ್ಮ ಸಭಾನಾಯಕರು ಮತ್ತು ಇತರ ಸ್ನೇಹಿತರು ಹೇಳಿರುವ ಎಲ್ಲಾ ವಿಚಾರಗಳನ್ನೂ ಸಹ ನಾನು ಸಮರ್ಥಿಸುತ್ತೇನೆ. ಇದರ ಜೊತೆಗೆ ಈ ಸಭಾ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ತಮ್ಮನ್ನು ಈ ಹೊಸ ರಾಜ್ಯಾಂಗದ ಪ್ರಕಾರ ನಿರ್ಮಿತವಾಗಿರತಕ್ಕ ಈ ಸಭೆಗೆ ತಾವು ಪ್ರಥಮ ಅಧ್ಯಕ್ಷರಾಗಿರಬೇಕೆಂದು ಗೊತ್ತುಮಾಡಿರತಕ್ಕಂಥ ಆ ಪರಶಿವನನ್ನೂ ಸಹ ವಂದಿಸುತ್ತೇನೆ. ಏಕೆಂದರೆ ಪ್ರಾಯಶಃ ನನಗೆ ತಿಳಿದಿರುವುದು ಇಂಥ ಅವಕಾಶ ದೊರೆಯತಕ್ಕದ್ದು ಕೆಲವು ವ್ಯಕ್ತಿಗಳಿಗೆ ಮಾತ್ರ. ಅದಕ್ಕಾಗಿಯೇ ಕೆಲವರು ಜನ್ಮತಾಳಿದ್ದಾರೆ ಎಂದು ಹೇಳುವವರಲ್ಲಿ, ನಂಬಿಕೆಯುಳ್ಳವರಲ್ಲಿ ನಾನೊಬ್ಬ. ಆ ಕಾರಣದಿಂದ ಇಂಥಸುಯೋಗವನ್ನು ತಾವು ಸದುಪಯೋಗಪಡಿಸಿಕೊಂಡು ಈ ಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿಯೂ, ಎಲ್ಲರ ಮೆಚ್ಚುಗೆಗೆ ಪಾತ್ರವಾಗುವಂತೆಯೂ ಸಹ ನಡೆಸುವುದರಲ್ಲಿ ನನಗೆ ಸಂದೇಹವಿಲ್ಲ. ತಮ್ಮಲ್ಲಿರತಕ್ಕಂಥ ವೈಯುಕ್ತಿಕ ಸ್ವಭಾವ, ವಿಶಾಲವಾದ ಹೃದಯ ಮತ್ತು ಸಾಧು ಸ್ವಭಾವ ಇವೆಲ್ಲವನ್ನೂ ನೋಡಿ ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ಸಹ ಈ ಸಭೆಯ ಸ್ಟ್ಯಾಂಡಿಂಗ್ ಆರ್ಡರ್ಸ್ ಮತ್ತು ನಿಬಂಧನೆಗಳು ಅಥವಾ ರಾಜ್ಯಾಂಗದಲ್ಲಿ ಏನೇನು ಅನುಕೂಲತೆಗಳು ಇವೆಯೋ ಅವೆಲ್ಲವನ್ನೂ ಸಂಪೂರ್ಣವಾಗಿ ಅನುಭವಿಸುವುದರಲ್ಲಿ ಸಂದೇಹವಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಜೊತೆಗೆ ಈ ಸಭೆಯ ಘನತೆ ಗೌರವಗಳನ್ನು ಕಾಪಾಡುವುದರಲ್ಲಿ ನಮ್ಮ ನಂಬಿಕೆಯನ್ನು ಮೀರಿಹೋಗದಂತೆ ನೋಡಿಕೊಳ್ಳುವುದಕ್ಕೆ ತಾವು ಹೆಚ್ಚು ನಿಗಾ ಕೊಡುವುದರಲ್ಲಿ ಅನುಮಾನವಿಲ್ಲ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಸ್ವಾಮಿ, ಈ ಸಂದರ್ಭದಲ್ಲಿ ನಾನು ಹಿಂದೆ ಅಧಿಕಾರದಲ್ಲಿದ್ದು ಈ ದಿವಸ ಅದನ್ನು ಬಿಟ್ಟಿರತಕ್ಕ ನಮ್ಮ ಹಿಂದಿನ ಅಧ್ಯಕ್ಷರಾಗಿದ್ದ ಶ್ರೀಮಾನ್ ಎ. ವೆಂಕಟಪ್ಪನವರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಅವರು ಮೈಸೂರು ಶಾಸನ ಸಭೆಯ ಸದಸ್ಯರಾಗಿ ಪ್ರಥಮತಃ ಖಾಸಗೀ ಅಧ್ಯಕ್ಷರಾಗಿಯೂ, ಹಿಂದಿದ್ದ ಪ್ರತಿನಿಧಿ ಸಭೆಯ ಅಧ್ಯಕ್ಷರಾಗಿಯೂ ಚುನಾಯಿತರಾಗಿದ್ದರು. ಅದೂ ಅಲ್ಲದೆ ಈ ರಾಜ್ಯಾಂಗವು ಜಾರಿಗೆ ಬಂದಮೇಲೆ ಪ್ರೊವಿನ್ಷಿಯಲ್ ರೆಜಿಸ್ಲೇಚರಿಗೆ ಪ್ರಥಮ ಅಧ್ಯಕ್ಷರಾಗಿ ಚುನಾಯಿತರಾದರು. ಅವರೂ ಸಹ ತಮ್ಮ ಶ್ರೇಷ್ಠ ಗುಣಗಳನ್ನು ಪ್ರದರ್ಶಿಸಿದ್ದಾರೆ. ಆಗಿನ ಸದಸ್ಯರೆಲ್ಲರೂ ಸಹ ನನಗೆ ತಿಳಿದಮಟ್ಟಿಗೆ ಕಳೆದ ಶಾಸನ ಸಭೆಯ ಅಧ್ಯಕ್ಷರಾಗಿದ್ದಾಗ ಅವರು ತೋರಿಸಿರುವ ಔದಾರ್ಯಕ್ಕಾಗಿ ಎಷ್ಟೋ ಮೆಚ್ಚಿದ್ದಾರೆ. ಅದನ್ನು ಎಷ್ಟು ಹೇಳಿದರೂ ಸಾಲದಾಗಿದೆ. ಇಷ್ಟೇ ಅಲ್ಲದೆ ಎಲ್ಲರ ಪ್ರೀತಿಪಾತ್ರರಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದ ಶ್ರೀಮಾನ್ ವೆಂಕಟಪ್ಪನವರಿಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಈ ಮಾನ್ಯ ಸಭೆಯ ಪರವಾಗಿ ಅರ್ಪಿಸಿ ಮತ್ತೊಮ್ಮೆ ಈಗ ಚುನಾಯಿತರಾಗಿರುವ ತಮಗೂ ನನ್ನ ಹೃತ್ಪೂರ್ವಕವಾದ ಅಭಿನಂದನೆ ಸಲ್ಲಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

**Sri B. T. KEMPARAJ** (Bangalore South-Scheduled Castes).-Mr. Speaker, Sir, it gives me really a great pleasure to congratulate you upon this occasion. It is really a great turning point in the history of Mysore State. It is for the first time that you have been elected as Speaker of this Assembly which has been elected on the principle of adult franchise. Though you belong to a particular party called the Congress Party, the position and the place that you are occupying as Speaker of this Legislative Assembly may not give room for you to stoop to any party feelings. As a Minister you have administered the country impartially for the past 4½ years. It is true that you will do more service to the country as the Speaker of this House by preserving impartiality for the coming years. Therefore I congratulate you once again on behalf of the Members of this House.

**Sri B. V. NARAYANA REDDY** (Bagepalli—Gudibanda).—I am really glad that you have given me an opportunity for offering you my heart-felt and hearty congratulations on the occasion of your having been duly elected as the Speaker of this Assembly. I too have got all the praises that my other friends have for you, but I do not want to take up the precious time of this House. But at the same time I request you to give chances of fair representation to the members of the Opposition. I am sure you will do so. I pray that God may shower His blessings on you.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು (ಹೊಸಕೋಟೆ–ಆನೇಕಲ್).—ಮಾನ್ಯ ಅಧ್ಯಕ್ಷರೇ, ವಯಸ್ಕರ ಮತದಾನ ಪದ್ಧತಿಯ ಮೇಲೆ ರಚಿತವಾದಂಥ ಈ ಮಾನ್ಯ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಬೇಕೆಂದು ಹೃತ್ಪೂರ್ವಕವಾಗಿ ತಮ್ಮನ್ನು ಸ್ವಾಗತಿಸುವುದಕ್ಕೆ ಬಹಳ ಸಂತೋಷಿಸುತ್ತೇನೆ. ಈ ಸಂದರ್ಭದಲ್ಲಿ ಇಂದಿನ ಸಭೆಯ ಅಧ್ಯಕ್ಷರಾಗಿದ್ದು ಸೇವೆ ಸಲ್ಲಿಸಿದ ಶ್ರೀಮಾನ್ ವೆಂಕಟಪ್ಪನವರನ್ನು ವಂದಿಸತಕ್ಕದ್ದು ನನ್ನ ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ. ಶ್ರೀಮಾನ್ ವೆಂಕಟಪ್ಪನವರನ್ನು ಹತ್ತು ವರ್ಷಗಳಿಂದಲೂ ನಾನು ಬಲ್ಲೆ. ಬೆಂಗಳೂರು ಜಿಲ್ಲಾ ಬೋರ್ಡ್ ಸದಸ್ಯರಾಗಿದ್ದಾಗ ಅವರೊಂದಿಗೆ ಕೆಲಸಮಾಡಿದ್ದೇನೆ. ಅವರ ಗುಣಗಳನ್ನು ಬಹುಮಟ್ಟಿಗೆ ಹಿಂದೆ ಮಾತನಾಡಿದ ಸದಸ್ಯರು ಮಾಡಿದ್ದಾರೆ. ಅವರ ಬುದ್ಧಿಶಕ್ತಿ, ಕಾರ್ಯಕಲಾಪಗಳನ್ನು ಕಂಡು ಅವರಲ್ಲಿ ಗುರುತ್ವ ಮತ್ತು ಪೂಜ್ಯ ಭಾವನೆಯುಂಟಾಗಿದೆ ಎಂದು ಇಷ್ಟು ಮಾತ್ರ ಹೇಳಬಯಸುತ್ತೇನೆ. ಬಹಳ ಸರಳವಂತರಾಗಿದ್ದು ಸರ್ವರ ಮನ್ನಣೆ ಪಡೆಯತಕ್ಕ ಸ್ವಭಾವದವರಾದ ಶ್ರೀಮಾನ್

ವೆಂಕಟಪ್ಪನವರನ್ನು ಈ ಸಂದರ್ಭದಲ್ಲಿ ವಂದಿಸಬೇಕಾಗಿದೆ. ಅದನ್ನು ಸಂತೋಷದಿಂದ ಮಾಡುತ್ತಾ ಇದ್ದೇನೆ. ಇನ್ನು ಈ ದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿರತಕ್ಕ ಶ್ರೀಮಾನ್ ಸಿದ್ದಯ್ಯನವರ ವಿಷಯ ಹೆಚ್ಚಾಗಿ ಹೇಳಬೇಕಾಗಿಲ್ಲ. ಹಿಂದೆ ಮಾತನಾಡಿದ ಮಾನ್ಯ ಸಹೋದರರು ಬಹುಮಟ್ಟಿಗೆ ಅವರ ಗುಣಗಾನಮಾಡಿದ್ದಾರೆ. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದಿಂದ ಅವರನ್ನು ಅಧ್ಯಕ್ಷಸ್ಥಾನಕ್ಕೆ ನಿಲ್ಲಿಸಿದ್ದರೂ ಕೂಡ ಇತರ ಪಕ್ಷಗಳವರಿಂದಲೂ ಅವರು ಮತಗಳನ್ನು ಗಳಿಸಿದ್ದಾರೆ. ಇದೊಂದೇ ಅವರು ಎಷ್ಟು ಜನಾನುರಾಗಿಗಳು ಎಂಬುದಕ್ಕೆ ಸಾಕ್ಷಿಯಾಗಿದೆ. ಇದರಿಂದ ಅವರು ಅಧ್ಯಕ್ಷಸ್ಥಾನದಲ್ಲಿದ್ದು ಸದಸ್ಯರೆಲ್ಲರೂ ಒಂದು ಎನ್ನತಕ್ಕ ಭಾವನೆಯನ್ನು ಹೃತ್ಪೂರ್ವಕವಾಗಿಟ್ಟುಕೊಂಡು ನಿಷ್ಪಕ್ಷಪಾತವಾಗಿ ಕೆಲಸಮಾಡುತ್ತಾರೆ ಎಂಬುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಆ ಶಕ್ತಿಯನ್ನು ಅವರಿಗೆ ಪರಮಾತ್ಮನು ದಯಪಾಲಿಸಲಿ ಎಂದು ಪ್ರಾರ್ಥಿಸಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಶ್ರೀ ವಿ. ವೆಂಕಟಪ್ಪನವರು (ಚನ್ನಪಟ್ಟಣ).—ಮಾನ್ಯ ಅಧ್ಯಕ್ಷರೇ, ಈ ದಿವಸ ತಮಗೆ ಅಭಿನಂದನೆಗಳನ್ನು ಸಮರ್ಪಿಸುವ ಸಂದರ್ಭದಲ್ಲಿ ಸ್ನೇಹಿತರು ಕೆಲವರು ನನ್ನ ವಿಷಯವನ್ನೂ ಪ್ರಸ್ತಾಪಿಸಿದ್ದರಿಂದ ನಾನು ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿ ಬಂದಿದೆ. ಈ ಸಭೆಯಲ್ಲಿರತಕ್ಕಂಥ ಸದಸ್ಯರೆಲ್ಲರಿಗಿಂತ ಹೆಚ್ಚಿನ ಕಾಲ ತಮ್ಮ ಪರಿಚಯ ನನಗಿದೆ. ತಾವು ಕಾಂಗ್ರೆಸ್‌ಗೆ ಸೇರುವುದಕ್ಕೆ ಮುಂಚಿನಿಂದ ತಮ್ಮ ಜೊತೆಯಲ್ಲಿ ನ್ಯಾಯವಿಧಾಯಕಸಭೆ, ಪ್ರಜಾಪ್ರತಿನಿಧಿಸಭೆ ಇವುಗಳಲ್ಲಿ ಕೆಲಸಮಾಡುವ ಸುಯೋಗ ನನಗೆ ದೊರೆತಿತ್ತು. ಆದ್ದರಿಂದ ತಮ್ಮ ಪರಿಚಯ ನನಗೆ ಚೆನ್ನಾಗಿದೆ ಎಂದು ಹೇಳುವುದರಲ್ಲಿ ಏನೂ ಸಂಶಯವಿಲ್ಲ. ತಮಗಿರತಕ್ಕ ದೈವಭಕ್ತಿ, ಶಾಂತಮನೋಭಾವ ಇವುಗಳು ಈ ಸ್ಥಾನಕ್ಕೆ ಬಹಳ ಅಗತ್ಯವಾದ ಗುಣಗಳು ಎಂಬುದಾಗಿ ನಾನು ಭಾವಿಸಿದ್ದೇನೆ. ಆದ್ದರಿಂದ ಈ ಸ್ಥಾನದ ಗೌರವ ಮತ್ತು ಈ ಸಭೆಯ ಗೌರವ ಹೆಚ್ಚಿ ಇದುವರೆಗೂ ಮೈಸೂರು ದೇಶ ಈ ವಿಷಯದಲ್ಲಿ ಹೆಚ್ಚಿನ ಗೌರವವನ್ನು ಹೇಗೆ ಸಂಪಾದಿಸಿದೆಯೋ ಅದಕ್ಕಿಂತ ಹೆಚ್ಚಿನ ಗೌರವವನ್ನು ತಾವು ಅದಕ್ಕೆ ಸಂಪಾದನೆಮಾಡಿ ಕೊಡುತ್ತೀರಿ ಎಂದು ನಾನು ನಂಬಿ, ಭಗವಂತನು ಆ ರೀತಿ ಶಕ್ತಿಯನ್ನೂ ಮನೋಭಾವವನ್ನೂ ತಮಗೆ ಇನ್ನೂ ಹೆಚ್ಚಾಗಿ ಕೊಡಲಿ ಎಂದು ಹೇಳಿ ಪ್ರಾರ್ಥಿಸುತ್ತೇನೆ.

ಇನ್ನು ನನ್ನ ವಿಷಯದಲ್ಲಿ ನನ್ನ ಸ್ನೇಹಿತರು ಆಡಿರತಕ್ಕ ಮಾತುಗಳಿಗೂ ಈ ಸಭೆಯ ನಾಯಕರು ಹೇಳಿದಂಥ ಮಾತುಗಳಿಗೂ ನಾನು ತುಂಬಾ ಕೃತಜ್ಞನಾಗಿದ್ದೇನೆ. ಅದರಲ್ಲೂ ಹಿಂದಿನ ಸಭೆಯ ಪ್ರತಿಪಕ್ಷದ ನಾಯಕರಾಗಿದ್ದ ಜನಾಬ್ ಇಮಾಂರವರು ನನ್ನ ವಿಷಯದಲ್ಲಿ ನಿರ್ವಂಚನೆಯಿಂದ ನಡೆದುಕೊಂಡಿದ್ದೇನೆ ಎಂಬುದಾಗಿ ಹೇಳಿರುವುದಕ್ಕಿಂತ ಹೆಚ್ಚಿನ ಪ್ರಾಶಸ್ತ್ಯ ನನಗೆ ಬೇಕಾಗಿಲ್ಲ. ನಾನು ಈ ಕಾರ್ಯವನ್ನು ವಹಿಸಿಕೊಂಡಾಗ ನಿಷ್ಪಕ್ಷಪಾತದಿಂದ ನಡೆಯುವುದಕ್ಕೆ ಪ್ರಯತ್ನಪಡುತ್ತೇನೆ ಎಂದು ಹೇಳಿದ್ದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದೇನೆ ಎನ್ನುವುದಕ್ಕೆ ಇದೇ ಸಾಕ್ಷಿಯಾಗಿದೆ. ಆ ರೀತಿ ನಡೆಯುವುದಕ್ಕೆ ಮಾನ್ಯ ಸದಸ್ಯರುಗಳು ಆಗಿನ ಸಭಾನಾಯಕರು ಮತ್ತು ಸರ್ಕಾರ ಬಹುಮಟ್ಟಿಗೆ ಸಹಾಯಕವಾಗಿತ್ತು. ನನ್ನ ಎಲ್ಲಾ ಕಾರ್ಯಕಲಾಪಗಳನ್ನೂ ಆಗಿನ ನಾಯಕರು ಮತ್ತು ಸರ್ಕಾರ ನಡೆಸಿಕೊಟ್ಟು ಕಾರ್ಯ ಸುಗಮವಾಗುವಂತೆ ಮಾಡಿದ್ದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಸಭೆಯ ಮಾನ್ಯ ಸದಸ್ಯರು ಸಭೆಯ ಘನತೆ, ಗೌರವ ಮತ್ತು ಅಧ್ಯಕ್ಷ ಘನತೆ, ಗೌರವ ಏನು ಎಂಬುದನ್ನು ತಿಳಿದುಕೊಂಡಿದ್ದರೆ ಈ ಕಾರ್ಯ ಸುಗಮವಾಗಿ ನಡೆದು, ಕೆಲಸ ಯಶಸ್ವಿಯಾಗಿ ನಡೆದು ನಮ್ಮ ಸಭೆಯ ಕೀರ್ತಿ ಹೆಚ್ಚುತ್ತದೆ ಎಂದು ನಾನು ನಂಬಿದ್ದೇನೆ.

ಕೊನೆಯದಾಗಿ, ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ನಲ್ಲಿ ನನ್ನ ಜೊತೆಯಲ್ಲಿದ್ದು ಕೆಲಸಮಾಡಿದಂಥ ಎಲ್ಲಾ ಅಧಿಕಾರಿಗಳಿಗೂ ನಾನು ನನ್ನ ಕೃತಜ್ಞತೆಯನ್ನು ಸೂಚಿಸಬೇಕಾಗಿದೆ. ಅದರಲ್ಲೂ ಸೆಕ್ರೆಟರಿಗಳಾಗಿರತಕ್ಕ ಶ್ರೀಮಾನ್ ಜಿ. ಎಸ್. ವೆಂಕಟರಾಮಣಯ್ಯರ್ ಅವರು ಬಹಳ ದಕ್ಷರು, ಒಳ್ಳೆಯ ಸ್ವಭಾವವುಳ್ಳವರು. ಅಂಥಾ ಸ್ಟಾಫ್ ತಮಗೆ ಇರುವಾಗ ತಮ್ಮ ಕಾರ್ಯ ಸುಲಲಿತವಾಗಿ ನಡೆಯುತ್ತದೆ ಎಂದು ನಾನು ನಂಬಿದ್ದೇನೆ.

ನನ್ನ ಸ್ನೇಹಿತರು ನನ್ನ ವಿಷಯದಲ್ಲಿ ತೋರಿಸಿರತಕ್ಕ ಗೌರವ ಮತ್ತು ವಿಶ್ವಾಸಕ್ಕಾಗಿ ಮತ್ತೊಮ್ಮೆ ಅವರೆಲ್ಲರಿಗೂ ವಂದಿಸಿ ಭಗವಂತನು ತಮಗೆ ಸರ್ವ ವಿಧವಾದ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ತಮ್ಮ ಯಶಸ್ಸು ಹೆಚ್ಚುವುದಕ್ಕೆ ಅನುಕೂಲಮಾಡಲಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*(Hon'ble Member Sri M. Linganna wanted time to be extended.)*

**Mr. SPEAKER.**—It is now five. But as many members desire to speak I will allow some more time.

**Sri K. HANUMANTHAIYA.**—I do not want to come in the way of your discretion, Sir.

**Mr. SPEAKER.**—I think the Hon'ble Member who is now standing Sri M. Linganna and Sri Sivarudrappa will speak for three minutes each and then we will close.

**Sri M. LINGANNA** (Nanjangud).—Mr. Speaker, after the felicitations by the Hon'ble Leader of the House, it will probably be redundant that members belonging to the party should speak. Probably because of that I did not catch your eye very early. That apart, it gives me great pleasure in expressing my hearty congratulations on your election as Speaker of this august House. We have witnessed an august scene indeed, the august scene of your coming to the Chair as Speaker of this House and Sri Venkatappa retiring from the Chair. Indeed your office is of paramount importance because I believe that the Chair of this House is a medium through which the transactions of this House are conveyed to the Government and to the Rajpramukh. In this sense, I believe, you are occupying a place of a high order of privilege

(SRI M. LINGANNA.)

and of a high responsibility. As a member of the organisation which fought for independence along with the Indian National Congress, I know that you have sacrificed a lot and it needs very little for me to say or rather enumerate once again what you have done so far as the fight for the country is concerned. It would be nothing but a redundancy and hence I would straightaway go to the point concerned about the position that you are now occupying.

No doubt, it was expressed by several members that the position of the Speaker is rather a difficult one, in the sense that it will require a lot of patience, a lot of presence of mind. In this sense, the position that you are occupying, Sir is rather a difficult position. But I hope that you have all the great qualities that are needed of the Speaker by which you can command the respect and unanimous support of each and every section of this august House. No doubt, an experiment in democracy is going on in our country. We are trying to create precedents of our own by giving this place to an eminent person rather than to a back-bencher. A back-bencher is always preferred in the British Parliament. Here in India the Speaker's position is invariably contested. Probably, in Mysore we are resorting to this unhealthy habit of contesting this Speaker's position. We could have set up a noble example by not contesting for this seat at all. But unfortunately, this seat has been contested. My learned friend who contested this seat against you has himself said that the proper person has been chosen and that you are the best person for this position. It gives me great pleasure to congratulate you on your success.

I also wish to say a few words about the retiring Speaker of this House, Sri V. Venkatappa. Though I had very little opportunity to contact him as a member, I had the opportunity of associating myself with him in various committees. He has also as I have gathered, conducted himself in such a manner as to command respect and praise from all sections of the House as an impartial man. I pay my respects to him also. Sir, I hope you will carry the business of this House in such a manner that every section of this House will feel proud of you and that every member of this House will feel that he is being looked after in a non-party spirit and with unwearied patience and firmness of mind.

Once again I congratulate you and thank you for the opportunity given to me to felicitate you.

*ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—ಅಧ್ಯಕ್ಷರೇ, ಮಾನವನು ನಿಜವಾಗಿಯೂ ಉನ್ನತ ಪದವಿಯನ್ನು ಪಡೆಯುವಂಥ ಅತ್ಮವನ್ನು ಹೊಂದಬೇಕಾದರೆ, ಸೇವೆ ಮತ್ತು ತ್ಯಾಗ ಎಂಬ ಗುಣಗಳು ಅವನಲ್ಲಿ ಇರಬೇಕಾದ್ದು ಅವಶ್ಯಕ. ಆದರೂ ಮಾನವ ಜನಾಂಗದ ಸೇವೆಗಾಗಿ ಅತನು ತೋರಿಸಿರತಕ್ಕ ತ್ಯಾಗಕ್ಕಾಗಿ ಪ್ರಾಪಂಚಿಕ ಸ್ಥಾನಮಾನಗಳೇ ಅತನಿಗೆ ಸರಿಯಾದ ಗೌರವವಲ್ಲವೆಂದು ನನ್ನ ನಂಬಿಕೆ. ಈಗ ನಾವು ತಮ್ಮನ್ನು ಈ ಸ್ಥಾನಕ್ಕೆ ಚುನಾಯಿಸಿರತಕ್ಕಂಥಾದ್ದು ತಾವು ದೇಶಕ್ಕಾಗಿ, ದೇಶದ ಜನತೆಗಾಗಿ ಅಪಾರವಾದ ತ್ಯಾಗಮಾಡಿರುವುದಕ್ಕೆ ಪ್ರತಿಫಲವೆಂದಲ್ಲ. ಆ ದೃಷ್ಟಿಯಿಂದ ನಾವುಗಳು ನಿಮ್ಮನ್ನು ಆರಿಸಿಲ್ಲವೆಂದು ನಾನು ಭಾವಿಸಿದ್ದೇನೆ. ಏಕೆಂದರೆ, ಯಾವ ವ್ಯಕ್ತಿ ಮಾನವ ಜನಾಂಗಕ್ಕೆ ನಿಷ್ಕಲ್ಮಷ ಮನಸ್ಸಿನಿಂದ ತ್ಯಾಗಮಾಡುತ್ತಾನೋ, ಸೇವೆಮಾಡುತ್ತಾನೋ ಅವನಿಗೆ ಇಂಥ ಪ್ರಾಪಂಚಿಕಸ್ಥಾನಮಾನಗಳ ಅಪೇಕ್ಷೆಯೇ ಇರುವುದಿಲ್ಲ. ಆದ್ದರಿಂದ ನಾವಿಂದು ನಿಮ್ಮನ್ನು ಆ ಸ್ಥಳದಲ್ಲಿ ಕುಳ್ಳಿರಿಸಿರುವುದು ನಿಮ್ಮಲ್ಲಿರುವ ತ್ಯಾಗ ಮತ್ತು ಸೇವೆಯ ಮನೋಭಾವದ ಸೇವೆಯ ಸ್ಫೂರ್ತಿ ನಮ್ಮಲ್ಲಿ ಆವಿರ್ಭವಿಸಲಿ ಎಂಬ ಭಾವನೆಯಿಂದ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗಿಲ್ಲದೆ, ಒಂದುಪಕ್ಷ ಸುಮ್ಮನೆ ಹೀಗೆ ಸ್ಥಾನಗಳನ್ನು ಕೊಟ್ಟು ನಿಮ್ಮ ತ್ಯಾಗಕ್ಕೆ ನಿಮ್ಮ ದೇಶಸೇವೆಗಾಗಿ ಇದನ್ನು ಸಲ್ಲಿಸುವುದು ಎಂದು ಭಾವಿಸಿದರೆ ಅನೇಕ ಅನರ್ಥಗಳೂ ಸಂಕಟ ಸನ್ನಿವೇಶಗಳೂ ಉಂಟಾಗುತ್ತವೆಂದು ಹೇಳುತ್ತೇನೆ. ಆದ್ದರಿಂದ ತಾವು ಆ ಸ್ಥಾನದ ವ್ಯಾಮೋಹಕ್ಕೆ ಅಂಟಿಕೊಳ್ಳದೆ ತಮ್ಮಲ್ಲಿರುವ ತ್ಯಾಗಬುದ್ಧಿಯ ಸ್ಫೂರ್ತಿಯನ್ನು ನಮ್ಮಲ್ಲೂ ಉಂಟಾಗುವಂತೆ ಮಾಡಬೇಕೆಂದು ಹೇಳುತ್ತೇನೆ.

ನಾನು ತಮ್ಮ ವ್ಯಕ್ತಿತ್ವದಲ್ಲಿ ಒಂದು ವಿಶೇಷವಾದ ಅಂಶವನ್ನು ಕಾಣುತ್ತೇನೆ. ತಾವು ಸೇವಾನಾಮ ಪ್ರತೀಕವೆಂದರೆ ಅತಿಶಯೋಕ್ತಿಯಲ್ಲ. ಒಂದು ಹೋಲಿಕೆಯನ್ನು ಕೊಡುವುದಾದರೆ, ಮಗುವಿನಮೇಲೆ ತಾಯಿಯ ಪ್ರೇಮ ಕರುಣೆಗಳು ಅನೇಕವೇಳೆ ಬಹಳ ಹೆಚ್ಚಾಗಿ ಆ ಮಗುವಿಗೆ ಅಜೀರ್ಣವಾಗುವ ಸಂಭವಗಳೂ ಉಂಟು. ಹಾಗೆಯೇ ತಮ್ಮ ಕರುಣೆಗೂ ವಿಶ್ವಾಸಕ್ಕೂ ಪಾತ್ರರಾದ ನಾವು ನಿಮ್ಮ ಕರುಣೆಯಿಂದ ಅಜೀರ್ಣಹೊಂದದ ಹಾಗೆ ನೋಡಿಕೊಳ್ಳುವುದು ನಿಮ್ಮ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಅದನ್ನು ತಾವು ಮನಸ್ಸಿನಲ್ಲಿಟ್ಟು ನಿಮಗೆ ವಹಿಸಿದ ಈ ಜವಾಬ್ದಾರಿ ಕಾರ್ಯವನ್ನು ಭಗವಂತನು ಮೆಚ್ಚುವಂತೆ, ದೇಶವು ಮೆಚ್ಚುವಂತೆ ಯಶಸ್ವಿಯಾಗಿ ನಿರ್ವಹಿಸಲು ಸರ್ವ ಶಕ್ತಿಯನ್ನು ಭಗವಂತನು ತಮಗೆ ಕೊಡಲೆಂದು ಹಾರೈಸುತ್ತಾ ಮತ್ತೊಮ್ಮೆ ತಾವು ಈ ಸ್ಥಾನವನ್ನಲಂಕರಿಸಿದ್ದಕ್ಕಾಗಿ ನನ್ನ ಮನಃಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ಈ ಸ್ಥಾನವನ್ನು ತಮಗೆ ಬಿಟ್ಟುಕೊಟ್ಟು, ಹೋಗುವವರಾದ ಶ್ರೀಮಾನ್ ವೆಂಕಟಪ್ಪನವರ ವಿಷಯವನ್ನು ಹೇಳುವಾಗ ನನಗೆ ಗಂಟಲು ಹಿಡಿಯುತ್ತದೆ. ಏಕೆಂದರೆ ನಾನು ವಿದ್ಯಾರ್ಥಿ ದೆಶೆಯಲ್ಲಿದ್ದಾಗಲೇ ನನಗೆ ಅಧ್ಯಕ್ಷರಾದ ಶ್ರೀಮಾನ್ ವೆಂಕಟಪ್ಪನವರ ದರ್ಶನಲಾಭ ಸಿಕ್ಕಿತ್ತು. ಹಾಸ್ಟಲಿನಲ್ಲಿದ್ದಾಗ ಅವರು ಬಂದು ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಪ್ರೋತ್ಸಾಹ, ಅವರಲ್ಲಿ ದೇಶಪ್ರೇಮವನ್ನುಂಟುಮಾಡುವ ವಿಷಯದಲ್ಲಿ ಅವರು ವಹಿಸುತ್ತಿದ್ದ ಆಸಕ್ತಿ—ಇವು ಈಗಲೂ ನನಗೆ ಜ್ಞಾಪಕದಲ್ಲಿದೆ. ಅವರು ಆ ಕಾಲದಿಂದಲೂ ಅಷ್ಟು ದೇಶಪ್ರೇಮಿಗಳಾಗಿದ್ದರು. ಮುಂದೆಯೂ ಅದೇ ರೀತಿಯಾಗಿ ನಡೆದುಕೊಂಡು ಬಂದು ತಾವು ಹೊತ್ತ ಜವಾಬ್ದಾರಿಯನ್ನು ದೇಶ ಮೆಚ್ಚುವಂತೆ, ಅದಕ್ಕಿಂತಲೂ ಹೆಚ್ಚಾಗಿ ದೇವರು ಮೆಚ್ಚುವಂತೆ ನಡೆಸಿಕೊಂಡು ಬಂದಿದ್ದಾರೆ. ಅವರಿಗೂ ನಮ್ಮ ವಂದನೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯ. ಆದ್ದರಿಂದ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸಿ, ಇಂದು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ತಮಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು (ಗುಂಡ್ಲುಪೇಟೆ–ಹೆಗ್ಗಡದೇವನಕೋಟೆ).—ಅಧ್ಯಕ್ಷರೇ, ಈ ದಿವಸ ಪ್ರಥಮತಃ ಈ ಸಭೆಯ ಪ್ರಥಮ ಅಧ್ಯಕ್ಷರಾಗಿ ತಾವು ಚುನಾಯಿತರಾಗಿ ಬಂದಿರುವುದು ನಮಗೆಲ್ಲಾ ಬಹಳ ಸಂತೋಷವನ್ನುಂಟುಮಾಡಿದೆ. ನನಗೆ ತಮ್ಮ ವಿಚಾರದಲ್ಲಿ ಹೆಚ್ಚಿಗೆ ಹೊಗಳಬೇಕೆಂಬ ಆಶೆಯಿಲ್ಲ. ಮುಖ್ಯವಾಗಿ ಈ ಸಭೆಯ ಸಂಪ್ರದಾಯದ ಪ್ರಕಾರ ತಮ್ಮ ಗುರುತರ ಜವಾಬ್ದಾರಿಯ ವಿಷಯದಲ್ಲಿ ನಾಲ್ಕು ಮಾತುಗಳನ್ನಾಡುತ್ತೇನೆ.

ತಮಗೆ ಇವತ್ತಿನ ದಿವಸ ವಹಿಸಿರುವ ಜವಾಬ್ದಾರಿಯ ಕೆಲಸ, ಗೌರವಸ್ಥಾನ ಬಹಳ ದೊಡ್ಡದು. ಈ ಒಂದು ಕರ್ತವ್ಯ ನಿರ್ವಹಣೆಯಲ್ಲಿ, ತಾವು ದೇಶದ ದೊಡ್ಡ ಸಭೆಯಾದ ಈ ಸಭೆಯ ಘನತೆ ಗೌರವಗಳನ್ನು ಎಲ್ಲಾ ಪಾರ್ಟಿಗಳ ಮನೋಭಿಪ್ರಾಯವನ್ನೂ ಅರಿತು, ಈ ಸಭೆಯ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಂಡು ಬರುತ್ತೀರೆಂದು ನಾನು ಭಾವಿಸಿದ್ದೇನೆ. ಹಿಂದೆ ಮಾತನಾಡಿದ ಸದಸ್ಯರು ಹೇಳಿದ ಹಾಗೆ ತಾವು ಕಾಂಗ್ರೆಸ್ ಪಾರ್ಟಿಯವರಾದರೂ ಕೂಡ, ಕಾಂಗ್ರೆಸೇತರರಿಗೂ ಕೂಡ ತಮ್ಮ ವಿಚಾರದಲ್ಲಿ ಸಹಾನುಭೂತಿ, ಪ್ರೇಮ ವಿಶ್ವಾಸಗಳಿವೆ. ಅದನ್ನು ತಾವು ಬೆಳೆಸಿಕೊಂಡು ಬಂದಿದ್ದೀರಿ ಎಂದ ಮೇಲೆ ತಮ್ಮ ಅಧಿಕಾರಾವಧಿಯಲ್ಲಿ ನಮ್ಮ ಈ ಸಭೆಯ ಘನತೆ ಗೌರವಗಳಿಗೆ ಕುಂದುಕ ಬರುವುದಿಲ್ಲವೆಂದು ನಾನು ನಂಬಿದ್ದೇನೆ.

ಹಿಂದೆ ಸಭಾಧ್ಯಕ್ಷರಾಗಿದ್ದ ಶ್ರೀಮಾನ್ ವೆಂಕಟಪ್ಪನವರು ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಾನು ಸಹ ಆ ಸಭೆಯ ಸದಸ್ಯನಾಗಿದ್ದೆ. ಪ್ರಜಾಪ್ರತಿನಿಧಿ ಸಭೆಯು ನಿವೃತ್ತಿಯಾದ ಮೇಲೆ ಕಳೆದ ಈ ಸಭೆಯಲ್ಲಿಯೂ ಅವರು ಅಧ್ಯಕ್ಷರಾಗಿ ಚುನಾಯಿತರಾಗಿ ಬಂದದ್ದು ಅವರಲ್ಲಿದ್ದ ಶ್ರೇಷ್ಠಗುಣಗಳನ್ನು ಸೂಚಿಸುತ್ತದೆ. ಅವರೂ ತಮ್ಮ ಹಾಗೆಯೇ ಕಾಂಗ್ರೆಸ್ ಪಾರ್ಟಿಯಲ್ಲಿದ್ದವರು ಕಾಂಗ್ರೆಸ್ ಪಾರ್ಟಿಯವರಾಗಿದ್ದರೂ ಈ ಸಭೆಯ ಅಧ್ಯಕ್ಷಸ್ಥಾನಕ್ಕೆ ಬಂದ ಮೇಲೆ ಎಲ್ಲಾ ಪಾರ್ಟಿಯವರಿಗೂ ಸೇರಿದವರಾಗಿ ಪಕ್ಷಾತೀತವಾಗಿ ವರ್ತಿಸಿದ್ದಾರೆ. ಹಿಂದೆ ಮಾತನಾಡಿದ ಸದಸ್ಯರುಗಳು ಹೇಳಿದ್ದು ನ್ಯಾಯವಾಗಿದೆ. ಅವರಂತೆಯೇ ತಾವೂ ಇನ್ನು ಮುಂದೆ ಪಕ್ಷಾತೀತರಾಗಿರಬೇಕು; ಯಾವ ಪಕ್ಷವನ್ನೂ ಸೇರಕೂಡದೆಂದು ನಾನು ಆಶಿಸುತ್ತೇನೆ.

ತಾವೂ ಈ ದಿವಸ ತಮಗೆ ಅಭಿನಂದನೆಗಳನ್ನು ಸಲ್ಲಿಸುವ ಸಂದರ್ಭದಲ್ಲಿ ತಮ್ಮ ಪಕ್ಷದವರಿಗೆ ಎಷ್ಟು ಅವಕಾಶ ಕೊಟ್ಟಿರೋ ಇತರ ಎಲ್ಲಾ ಪಕ್ಷದವರಿಗೂ ಅಷ್ಟೇ ಅವಕಾಶ ಕೊಟ್ಟಿದ್ದೀರಿ ಎಂಬುದು ಗೊತ್ತಾಗಿದೆ. ಹೀಗೆಯೇ ಇನ್ನು ಮುಂದೆಯೂ ಪ್ರತಿಪಕ್ಷಗಳವರ ಹಿತರಕ್ಷಣೆಯನ್ನು ಮಾಡುತ್ತೀರೆಂದು ನಾನು ನಂಬಿದ್ದೇನೆ.

ಇನ್ನೊಂದು ಸಂತೋಷದ ವಿಷಯ ವೇನೆಂದರೆ, ಈ ಅಭಿನಂದನೆಗಳನ್ನು ಕೊಡುವ ಸಂದರ್ಭದಲ್ಲಿ, ಈ ದಿವಸ ಎಲ್ಲ ಸದಸ್ಯರೂ ಕೂಡ ಒಂದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಯಾರೊಬ್ಬರೂ ಭಿನ್ನಾಭಿಪ್ರಾಯವನ್ನು ಸೂಚಿಸಿಲ್ಲ. ತಮ್ಮ ಅಧಿಕಾರಾವಧಿ ಮುಗಿಯುವ ಸಂದರ್ಭದಲ್ಲೂ ಕೂಡ ಇದೇ ರೀತಿಯ ವಾತಾವರಣ ಉಂಟಾಗಲಿ, ದೇವರು ಅಂಥ ಶಕ್ತಿಯನ್ನು ಕೊಟ್ಟು ತಾವು ತಮ್ಮ ವಿಷಯದಲ್ಲಿ ಇದೇ ಅಭಿಪ್ರಾಯವನ್ನು ಉಳಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡಲೆಂದು ಹೇಳಿ ತಮಗೆ ಕಲ್ಯಾಣವಾಗಲೆಂದು ಹಾರೈಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ ಅವರು (ನೆಲಮಂಗಲ–ಅನುಸೂಚಿತ ಜಾತಿಗಳು).—ಸ್ವಾಮಿ, ಇಂದಿನ ದಿವಸ ತಮ್ಮನ್ನು ಈ ಜವಾಬ್ದಾರಿಯುತಸ್ಥಾನಕ್ಕೆ ಕರೆದೊಯ್ಯುತ್ತಿರುವ ವೇಳೆಯಲ್ಲಿ, ನಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸತಕ್ಕ ಸಮಯದಲ್ಲಿ, ಅನೇಕರು ಮಾತನಾಡಿದ್ದರೂ ತಮ್ಮ ಗುಣಕಥನ ಮುಗಿದು ಹೋಗಿದೆಯೆಂದು ನಾನು ಭಾವಿಸುವುದಿಲ್ಲ. ಆದರೂ ನಾನು ಇದರಲ್ಲಿ ಉಳಿದಿರುವ ಯಾವ ಭಾಗವನ್ನೂ ಪ್ರಾರಂಭ ಮಾಡುವುದೂ ಇಲ್ಲ. ಈಗ ಮಾನ್ಯ ಸದಸ್ಯರು ಕುಳಿತಿರುವ ಈ ಸಭೆಯನ್ನು ನಾನು ನೋಡಿ ಇದನ್ನು ಹಿಂದಿನ ಸಭೆಗೆ ಹೋಲಿಸಿದರೆ ಖಚಿತವಾದ ನಿರ್ದಿಷ್ಟವಾದ ಒಂದು ವ್ಯತ್ಯಾಸ ಕಾಣುತ್ತದೆ. ಅದೇನೆಂದರ, ಹಿಂದೆ ನಾನು ವಿದ್ಯಾರ್ಥಿದೆಶೆಯಲ್ಲಿದ್ದಾಗಲೂ ಶಾಸನ ಸಭೆಗಳನ್ನು ನೋಡುತ್ತಿದ್ದೆ. ಆಗ ಋಷಿಗಳಂತೆ ಹೆಚ್ಚು ವಯಸ್ಸಿನವರಾದ ದೊಡ್ಡ ಮನುಷ್ಯರು ಮಾತ್ರ ಈ ಸಭೆಗಳಲ್ಲಿರುತ್ತಿದ್ದರು. ಈಗಲಾದರೋ ನಮ್ಮ ಪುಣ್ಯ ವಿಶೇಷವೋ ಏನೋ ಎಂಬಂತೆ, ಅಮೇರಿಕಾದಲ್ಲಿರುವ ಸಂಪ್ರದಾಯದಂತೆ, ರಾಜಕೀಯದಲ್ಲಿ ತರುಣರಿಗೂ ತರಬೇತು ಕೊಡಬೇಕೆಂಬ ಉದ್ದೇಶದಿಂದ ಆ ಪದ್ಧತಿಯನ್ನನುಸರಿಸಿ ನಮ್ಮ ಮುಖ್ಯ ಮಂತ್ರಿಗಳು ನಮ್ಮ ಮೈಸೂರು ಸಂಸ್ಥಾನದಲ್ಲಿ ವಿದ್ಯಾವಂತರೂ ಉತ್ತಮರೂ ಆದ ತರುಣರಿಗೆ ಹೆಚ್ಚಿನ ಅವಕಾಶವನ್ನು ಕೊಟ್ಟು ಮುಂದೆಯೂ ಮೈಸೂರು ದೇಶದಲ್ಲಿ ಪ್ರಜಾಪ್ರಭುತ್ವ ಆಡಳಿತ ಭದ್ರವಾಗಿ ನಡೆದುಕೊಂಡು ಹೋಗಬೇಕೆಂಬ ದೂರದೃಷ್ಟಿಯನ್ನಿಟ್ಟುಕೊಂಡು ಹಲವು ಮಂದಿ ಹಿರಿಯರೂ ಮತ್ತು ಅನುಭವಶಾಲಿಗಳೂ ಆದವರೊಡನೆ ಕೆಲವು ಮಂದಿ ತರುಣರನ್ನೂ ಈ ಸಭೆಗೆ ತಂದು ಬಣ್ಣ ಬಣ್ಣದ ಹೂವುಗಳಿಂದ ಕೂಡಿದ ಪುಷ್ಪಹಾರದಂತೆ ಈ ಸಭೆಯು ಶೋಭಿಸುವ ಹಾಗೆ ಮಾಡಿದ್ದಾರೆ. ಈಗ ಬೇರೆ ಬೇರೆ ಬಣ್ಣಗಳ ಪುಷ್ಪಗಳಿಂದ ಆದ ಸೊಗಸಾದ ಹಾರದಂತೆ ಮೈಸೂರಿನ ಕೀರ್ತಿಗೆ ತಕ್ಕಂತಹ ಶಾಸನ ಸಭೆಯನ್ನು ದೇಶದ ಹಿತಸಾಧಕವಾಗುವಂತೆ ಮಾಡತಕ್ಕ ಕಾರ್ಯಭಾರ ತಮ್ಮ ಮುಂದಿದೆ. ಈ ಕರ್ತವ್ಯ ತಮ್ಮ ಮೇಲಿರುವುದರಿಂದ ನಮಗೆ ಸರಿಯಾದ ತರಬೇತು ಕೊಟ್ಟು ಈ ಸಭೆಯನ್ನು ನಡೆಸಿಕೊಂಡು ಹೋಗುವಾಗ ಎಲ್ಲರ ಸಹಕಾರವನ್ನು ತೆಗೆದುಕೊಳ್ಳುವುದೂ ತಮ್ಮ ಕೈಯಲ್ಲಿದೆ. ಈಗ ತಾನೇ ಮುಖ್ಯ ಮಂತ್ರಿಗಳು ತಮ್ಮಲ್ಲಿರುವ ಅಸಾಧಾರಣ ಶಕ್ತಿಯನ್ನು ವಿವರಿಸಿ ತಮಗೆ ಹೃತ್ಪೂರ್ವಕವಾದ ಸಹ

(ಶ್ರೀ ಕೆ. ಪ್ರಭಾಕರ್ ಅವರು.)

ಕಾರವನ್ನು ನೀಡುವುದಕ್ಕೆ ಸಿದ್ಧರಾಗಿರುವುದಾಗಿ ತಿಳಿಸಿದ್ದಾರೆ. ಅವರ ಆಶಾಪುಷ್ಪ ಫಲವಾಗಿ ಪರಿಣಮಿಸಿ, ಮೈಸೂರಿನ ಕೀರ್ತಿ ಉನ್ನತಮಟ್ಟಕ್ಕೇರಿ, ಮೈಸೂರಿನ ಶಾಸನ ಸಭಾ ಸದಸ್ಯರು ಯಾವಾಗಲೂ ತಪ್ಪನ್ನೆಸಗುವುದಿಲ್ಲ, ನ್ಯಾಯವನ್ನೇ ಎತ್ತಿ ಹಿಡಿಯುತ್ತಾರೆಂಬ ಭಾವನೆ ದೆಹಲಿಯ ಸಭೆಗಳಿಗೆ ಹೋಗುವ ಮೈಸೂರಿನವರಿಂದಲೂ ಹೊರಸೂಸುತ್ತಿರಬೇಕು—ಅಂತಹ ಆತ್ಮಶಕ್ತಿಯನ್ನು ಪರಮಾತ್ಮನು ತಮ್ಮ ನೇತೃತ್ವದಲ್ಲಿ ನಮ್ಮೆಲ್ಲರಿಗೂ ಕರುಣಿಸಲಿ, ತಮ್ಮಂತಹ ಸ್ಪೀಕರುಗಳ ಸರ್ವಬಲವೂ, ಸಹಕಾರವೂ ಸದಾ ಸರ್ಕಾರಕ್ಕೆ ದೊರೆಯಲಿ ಎಂದು ಹಾರೈಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**Mr. SPEAKER.**—I think there should be some end for these speeches. Sri Palaniappan will be the last speaker.

**Sri M. PALANIAPPAN** (Ulsoor).—Mr. Speaker, Sir, it gives me profound pleasure to congratulate you on your being elected as the Speaker of this House. This is the first time in the history of this State that an election has taken place under adult franchise and after that you have been elected as the first Speaker of this democratic House. I need not say much about your past glories, but this much must be said. You have done much of self-sacrifice as a non-official and as a Minister you have shown integrity, and straightforwardness in your dealings. Of course, I am sure that this past experience of yours will help the Members of this august House and also the Hon'ble Ministers to lead the country to prosperity and plenty. On this occasion I should not forget to congratulate Sri V. Venkatappa for having conducted the past Assembly so ably. Though I was not a Member of the past Assembly, I understand from other friends who were Members of that House the meritorious services he has rendered and the quality of impartiality he has shown in his dealings. In conclusion, I once again congratulate you and thank you for having given me an opportunity to speak on this happy occasion.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು (ಚಿಕ್ಕಮಗಳೂರು-ಮೂಡಿಗೆರೆ).—ಸ್ವಾಮಿ, ವಯಸ್ಕರ ಮತದಾನದ ಮೇಲೆ ಚುನಾಯಿತರಾಗಿ ಬಂದಿರತಕ್ಕ ಸದಸ್ಯರನ್ನುಳ್ಳ ಈ ಸಭೆಗೆ ತಾವು ಅಧ್ಯಕ್ಷರಾಗಿದ್ದೀರಿ. ತಮ್ಮ ಮನೋನಿಶ್ಚಯ, ಕಾರ್ಯನಿರ್ವಹಣಶಕ್ತಿ ಮುಂತಾದ ಸದ್ಗುಣಗಳನ್ನೆಲ್ಲಾ ಈಗ ತಾನೇ ಭಾಷಣ ಮಾಡಿದ ಅನೇಕ ಸಹೋದರರು ತಿಳಿಸಿದ್ದಾರೆ. ನಾನೂ ಸಹ ತಮ್ಮ ಕೆಲಸಕಾರ್ಯಗಳನ್ನು ನೋಡಿದ್ದೇನೆ. ತಾವು ಬಹಳ ವರ್ಷಗಳಿಂದ ಶಾಸನ ಸಭೆಗಳ ಅನುಭವವನ್ನು ಪಡೆದಿದ್ದೀರಿ. ಮಂತ್ರಿಗಳಾಗಿ ನಾಲ್ಕೈದು ವರ್ಷಕಾಲ ಮೈಸೂರು ಸಂಸ್ಥಾನಕ್ಕೆ ಸೇವೆ ಸಲ್ಲಿಸಿ, ವಿಶೇಷವಾದ ಅನುಭವವನ್ನು ಹೊಂದಿದ್ದೀರಿ. ಇದರಿಂದ ತಾವು ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾಗಿ ಬಂದಿರುವುದು ವಿಶೇಷ ಸಂತೋಷದ ವಿಷಯ. ಈ ಸಭೆಯಲ್ಲಿ ಅನೇಕ ರಾಜಕೀಯ ಪಕ್ಷಗಳಿವೆ. ಎಲ್ಲ ಪಕ್ಷಗಳ ಅಭಿಪ್ರಾಯಗಳೂ ಸರಿಯಾಗಿ ತುಲನವಾಗಿ ಸರಿಯಾದ ತೀರ್ಮಾನಕ್ಕೆ ಬರಬೇಕಾದರೆ ಎಲ್ಲರಿಗೂ ಸರಿಯಾದ ಅವಕಾಶಬೇಕು. ಇದನ್ನೀಯಲು ತಾವು ಉದಾರ ಮನೋಭಾವವುಳ್ಳವರಾಗಿದ್ದೀರೆಂದು ನಾನು ನಂಬಿದ್ದೇನೆ. ತಮಗೆ ಆಯುರಾರೋಗ್ಯವನ್ನು ಕೊಟ್ಟು ಭಗವಂತನು ಮೈಸೂರಿನ ಕೀರ್ತಿ, ಮೈಸೂರಿನ ಶಾಸನ ಸಭೆಯ ಕೀರ್ತಿ ಭಾರತಕ್ಕೆ ಹರಡಿ, ಮಾದರಿಯಾಗಿರಲೆಂದು ಹಾರೈಸುತ್ತೇನೆ.

ಈಗ ಅಧ್ಯಕ್ಷ ಸ್ಥಾನದಿಂದ ನಿವೃತ್ತರಾಗಿರುವ ಮಹನೀಯರ ವಿಷಯದಲ್ಲಿ ಒಂದು ಮಾತು. ಪ್ರಜಾಪ್ರಭುತ್ವದಲ್ಲಿ ಈ ಸಭೆಯ ಅಧ್ಯಕ್ಷತೆಯನ್ನೂ ಕೆಲಸಕಾರ್ಯಗಳನ್ನೂ ದಕ್ಷತೆಯಿಂದ ನಡೆಸಿಕೊಂಡು ಬಂದಿದ್ದಾರೆ. ಅವರು ಸಾರ್ವಜನಿಕ ಕ್ಷೇತ್ರದಲ್ಲಿಯೂ ಜನರ ವಿಶ್ವಾಸವನ್ನು ಸಂಪಾದಿಸಿದ್ದಾರೆ. ದೇವರು ಅವರಿಗೂ ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಅಧ್ಯಕ್ಷರು ಬಹಳ ವಿಶ್ವಾಸದಿಂದ ನಾನೆರಡು ಮಾತುಗಳನ್ನಾಡಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸುತ್ತೇನೆ.

**Mr. SPEAKER.**—Hon'ble Members of the House, I am very grateful to you for having elected me to this high office of honour. I am really very thankful to the Leader of the House Sri K. Hanumanthaiya and other Members of the House who have said a good deal about me. I am greatly moved by the generous words that you have used.

ಶ್ರೀ ಎಸ್. ಸಿದ್ಧಪ್ಪನವರು (ಮಾಗಡಿ).—ಈ ಹೊತ್ತಿನ ತಮ್ಮ ಭಾಷಣವನ್ನು ಕನ್ನಡದಲ್ಲೇ ಮಾಡಿದರೆ ಒಳ್ಳೆಯದೆಂದು ಸೂಚಿಸುತ್ತೇನೆ.

**Mr. SPEAKER.**—ನಾಳೆಯಿಂದ ಕನ್ನಡದಲ್ಲೇ ಮಾತನಾಡುತ್ತೇನೆ. To judge a man, there are so many factors. To make any remarks about an individual, his accomplishments and his weaknesses as well as virtues and vices should be taken into consideration. Taking these factors into consideration, it would naturally give me immense pleasure not now, but at the time I lay down my office, if through my conduct in this House, I have earned the esteem and affection of you all. During the period I hold this office and while we work together I have every reason to expect and believe that you will extend your very effective, willing and ready co-operation. The Mysore State legislators, as history tells us, have built

up a great reputation for a high level of debate and I must say on this occasion that it depends mostly on you not merely to maintain that reputation but to enhance it so that the level of the debate and also the dignity of the House would be enhanced. While conducting the proceedings, you naturally expect me to be just and reasonable. I promise you that I will do my best. To the best of my capacity I will discharge my duty so that independence, impartiality, fairness and neutrality will be maintained so far as I am concerned (Hear, hear). I further give an assurance that I recognise and realise that I am bound to uphold the rights and privileges of the members, to whichever party they belong or to whichever group they belong and it is my duty to guard their interest. I need not tell you that every member has a right to criticise the administration and the administrators too, but that right of criticism is subject to certain restrictions and limitations as are embodied in rule 146. We will now engage ourselves in the common beneficial task. Let us work together in a cordial manner and with all harmony, inspired with the idea of a better and richer life for the ordinary people in our State and also with a view to secure under the new Constitution as it is embodied, justice, liberty, fraternity and equality to all the citizens of the country.

A reference was made as though new traditions and conventions are being thought of. I need not mention on this occasion, that times are changing. New problems crop up and very often various new points come to the forefront. In those circumstances it is but natural that new traditions and conventions have to be built up so that in due course they become precedents also. So there need not be any surprise; we will welcome such changes also as occasion arises.

I do not propose to take up much of your time. I do not know whether I deserve all that you have said about me. It is out of so much of affection that you have referred to some of my good qualities and not the vices. Whatever that may be, I am really very thankful to every one of you who have kind regards towards me, but the point is how far I will discharge my duty. That is the point for serious consideration on this occasion. As I have already promised, I will do my best in this direction, to the best of my capacity, and I once again repeat, with all impartiality.

Before I resume my seat, I feel it is my duty to say a word about my esteemed friend Sri V. Venkatappa. From my close association with him for the last quarter of a century I am convinced that he is a great friend of the people and particularly the agriculturists. He has been serving the State and the people for more than three decades. I venture to make this submission that he has gained vast experience and possesses wide knowledge of things and men and I further add that he is gifted with political sagacity and insight. That was the reason why he was able to discharge his duty while he was holding his high office. I take this opportunity and I wish to convey on my behalf and on behalf of you all, our appreciation and admiration of his valuable work in the last Assembly.

With these few words, I once again thank you for the kind words you have used and the instructions you have also given me as to how I should behave in the House.

---

MR. SPEAKER.—We have received notices of two adjournment motions. They will be considered on the 20th.

I am sure that members will have received the circular about the Address by the Rajpramukh to the members of both the Houses assembled together. This will be, as you are already aware in the Town Hall tomorrow at 12 NOON.

The House now stands adjourned to meet again at 12 NOON on the 20th, that is, day after tomorrow in this Assembly Hall.

*The Assembly adjourned at Forty Minutes past Five of the Clock to meet again at Twelve of the Clock on Friday, 20th June 1952.*

---

WD 2802—GPB—500—6-7-52